# ಗರಿಗಳಲ್ಲಿ ಗೀತಾಮೃತ

ಮೂಲ ತೆಲುಗು :
ಭಾರತ ಭಾಷಾ ಭೂಷಣ್
ಡಾ. ಕೇತವರಪು ರಾಜ್ಯಶ್ರೀ

ಕನ್ನಡ ರೂಪ :
ಗುರುಮೂರ್ತಿ ಪೆಂಡಕೂರು



ಯುವಕರ ಸಂಘದ ೬೮ನೇ ಪ್ರಕಟನೆ

# ಗರಿಗಳಲ್ಲಿ ಗೀತಾಮೃತ

ಮೂಲ ತೆಲುಗು :
ಭಾರತ ಭಾಷಾ ಭೂಷಣ್
ಡಾ. ಕೇತವರಪು ರಾಜ್ಯಶ್ರೀ

ಕನ್ನಡ ರೂಪ :
ಗುರುಮೂರ್ತಿ ಪೆಂಡಕೂರು

ಯುವಕರ ಸಂಘ (ರಿ)
ರಾಮನಗರ, ಹಗರಿಬೊಮ್ಮನಹಳ್ಳಿ - 583 212 ಬಳ್ಳಾರಿ ಜಿಲ್ಲೆ

GARIGALALLI GEETHAMRUTA

Telugu : Bharata Bhasha Bhushan
Dr. Ketavarapu Rajyasri
301, Gokul Apartments, Street No.4
Ashok Nagar, Hyderabad-50020
Telengana. M : 8500121990

Translated into Kannada by : Gurumurthy Pendakur, M.A.
B-201, Ramannas Midtown Rhythm Aptt.
Opp. Skylark greens, Ramangondanahalli
Bengaluru - 560066 M : 9611213584

Published by : Yuvakara Sangha (R)
Ramanagar,
Hagaribommanahalli - 583 212
Dist. : Bellary

© : Smt. Parvathi Pendakur

Price : ₹ 40-00 Pages : 24 + 60 = 84

First Impression : 2015, Copies : 500

Size : Crown 1/8, Used paper : 70 gsm Maplitho

ಗರಿಗಳಲ್ಲಿ ಗೀತಾಮೃತ

ಮೂಲ ತೆಲುಗು : ಭಾರತ ಭಾಷಾ ಭೂಷಣ್ ಡಾ. ಕೇತವರಪು ರಾಜ್ಯಶ್ರೀ

ಕನ್ನಡಕ್ಕೆ : ಗುರುಮೂರ್ತಿ ಪೆಂಡಕೂರು, ಎಂ.ಎ.,

ಪ್ರಕಾಶಕರು : ಯುವಕರ ಸಂಘ (ರಿ)
ರಾಮನಗರ, ಹಗರಿಬೊಮ್ಮನಹಳ್ಳಿ–೫೮೩ ೨೧೨
ಬಳ್ಳಾರಿ ಜಿಲ್ಲೆ.

© : ಶ್ರೀಮತಿ ಪಾರ್ವತಿ ಪೆಂಡಕೂರು

ಬೆಲೆ : ₹ ೪೦–೦೦ ಪುಟಗಳು : ೨೪ + ೬೦ = ೮೪

ಪ್ರಥಮ ಮುದ್ರಣ : ೨೦೧೫ ಪ್ರತಿಗಳು : ೫೦೦

ಸೈಜ : ಕ್ರೌನ್ ೧/ ೮
ಉಪಯೋಗಿಸಿದ ಹಾಳೆ : 70 gsmಮ್ಯಾಪಲಿಥೋ

ಮುಖಪುಟ :

ಮುದ್ರಣ :
ಪ್ರಭು ಗ್ರಾಫಿಕ್ಸ್,
ತೋಂಟದಾರ್ಯ ಮಠದ ಎದುರು, ಸ್ಟೇಶನ್ ರೋಡ, ಗದಗ.
ಮೊ : 9448186063, 9880904707 e-mail : prabhugadag@gmail.com

# ಮೊದಲ ಮಾತು

◆

'ಭಗವದ್ಗೀತೆ' ಎಂದರೆ ಆತ್ಮಜ್ಞಾನದ ಮತ್ತು ಭಕ್ತಿಯೋಗದ ದಾರಿದೀಪ. ಅತ್ಯಂತಿಕ ಸತ್ಯದ ಅನಾವರಣ. ಎಲ್ಲ ವಯಸ್ಸಿನ ಮಾನವರಿಗೆ ಭಗವದ್ಗೀತೆಯೇ ಮಾರ್ಗದರ್ಶಿ. ಮಾನವನ ಅಸ್ತಿತ್ವ, ಪ್ರಪಂಚದಲ್ಲಿ ಜೀವಿಯ ಬದುಕಿನ ಉದ್ದೇಶ ಮತ್ತು ಅವನ ಅನುದಿನದ ಉಳಿವಿಗಾಗಿರುವ ಹೋರಾಟದ ದರ್ಶನವೇ ಗೀತಾಮೃತ.

ಭಗವದ್ಗೀತೆಯು ದಿವ್ಯಾಮೃತವೆಂದರೆ ಕುರುಕ್ಷೇತ್ರದಲ್ಲಿ ಸಮಾವೇಶವಾದ ಕುರು–ಪಾಂಡವರ ಸೇನೆಗಳ ನಡುವೆ ಸಂಗ್ರಾಮ ಆರಂಭವಾಗುವ ಮುನ್ನ ಕೃಷ್ಣಾರ್ಜುನರ ನಡುವೆ ನಡೆದ ಆಧ್ಯಾತ್ಮಿಕ ಮತ್ತು ಧಾರ್ಮಿಕ ಸಂಭಾಷಣೆ.

ಭಗವಾನ್ ವ್ಯಾಸಮಹರ್ಷಿಗಳ ಶಿಷ್ಯನಾದ ಸಂಜಯನು ವ್ಯಾಸರ ಕೃಪೆಯಿಂದ ಪಡೆದ ದಿವ್ಯದೃಷ್ಟಿಯಿಂದ ಯುದ್ಧರಂಗದಲ್ಲಿ ನಡೆದ ಈ ಸಂಭಾಷಣೆಯನ್ನು ಮಹಾರಾಜನಾದ ಧೃತರಾಷ್ಟ್ರನಿಗೆ ಕಣ್ಣಿಗೆ ಕಟ್ಟುವಂತೆ ವಿವರಿಸಿದನು. ಆ ವಿವರಣೆಯೇ ಮನುಕುಲದ ಉದ್ಧಾರಕ್ಕಾಗಿ ದೊರೆಯಿತು.

ಭಗವದ್ಗೀತೆಯ ಉದ್ದೇಶವು ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ. ಅದು ಹೇಗೆಂದರೆ ನಾವು ಯಾವುದೇ ಔಷಧಿಯನ್ನು ಸೇವಿಸುವಾಗ ವೈದ್ಯರು ಸೂಚಿಸಿದಂತೆಯೇ ಸೇವಿಸಬೇಕಲ್ಲವೇ ? ಔಷಧಿಯನ್ನು ನಮಗೆ ತೋಚಿದಂತಾಗಲೀ ನಮ್ಮ ಇಷ್ಟ ಮಿತ್ರರು ತಿಳಿಸಿದಂತಾಗಲೀ ಸೇವಿಸಬಾರದು. ಆದ್ದರಿಂದ ಶ್ರೀಕೃಷ್ಣ ಭಗವಾನನು ತಿಳಿಸಿದಂತೆ ಭಗವದ್ಗೀತೆಯನ್ನು ನಾವು ಅಂಗೀಕರಿಸಬೇಕು.

ಭಗವದ್ಗೀತೆಯಲ್ಲಿ ೧೮ ಅಧ್ಯಾಯಗಳೂ, ೭೦೦ ಶ್ಲೋಕಗಳೂ ಇವೆ. ನಾನು ೧೦೮ ಶ್ಲೋಕಗಳನ್ನು ಆಯ್ದು ಸುಲಭವಾದ ತೆಲುಗಿನಲ್ಲಿ ಅನುವಾದಿಸಿದ್ದೇನೆ. ತೆಲುಗಿನಲ್ಲಿ **ಗರಿಗಳು** ಎಂಬ ಛಂದಸ್ಸಿನಲ್ಲಿ ಸಂಕ್ಷಿಪ್ತವಾದ ರೂಪದಲ್ಲಿ ಈ ಶ್ಲೋಕಗಳಿವೆ. ಸಾಮಾನ್ಯರು ಸುಲಭವಾಗಿ ಗೀತಾಮೃತವನ್ನು ತಿಳಿದು ಆತ್ಮಜ್ಞಾನ ಪಡೆದು ಆಧ್ಯಾತ್ಮಿಕ ಸಾಧನೆ-ಸಾಫಲ್ಯ ಪಡೆಯಲು ಸಾಧ್ಯ.

**ಬೆಳಕಿದ್ದಲ್ಲಿ ಕತ್ತಲು ಮಾಯ**
**ಜ್ಞಾನವಿದ್ದಲ್ಲಿ ಅಜ್ಞಾನ ಮಾಯ**

ಗೀತಾ ಪಠನದಿಂದ ನಿತ್ಯ ಜೀವನದಲ್ಲಿ **'ಕರ್ಮ'** ಅಥವಾ ಕಾಯಕದ ಅರ್ಥವಾಗುತ್ತದೆ.

**- ರಾಜ್ಯಶ್ರೀ**

# ಮುನ್ನುಡಿ

◆

ಭಾರತೀಯ ಆಧ್ಯಾತ್ಮ ಚಿಂತನೆಯಲ್ಲಿ ಪ್ರಮುಖವಾಗಿ ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳನ್ನು ಪ್ರಸ್ಥಾನತ್ರಯಂ ಎಂದು ಪರಿಗಣಿಸಲಾಗಿದೆ. ಈ ಮೂರು ತತ್ವಗ್ರಂಥಗಳು ಒಂದೇ ತತ್ವವನ್ನು ಪ್ರತಿಪಾದಿಸುತ್ತವೆ. ಹಿಂದೂ ಧರ್ಮದ ಆಧಾರ ಭೂತವಾದ ತತ್ವಗ್ರಂಥ ಯಾವುದೆಂದು ಕೇಳಿದರೆ **ಪ್ರಸ್ಥಾನತ್ರಯಂ** ಎಂದು ಪ್ರಸಿದ್ಧವಾದ ಈ ಮೂರು ಗ್ರಂಥಗಳೇ ಎನ್ನಬಹುದು. ಈ ಗ್ರಂಥಗಳಲ್ಲಿ ವಿವರಿಸಲ್ಪಡದ ಹಿಂದೂ ಧರ್ಮದ ಮೂಲ ಸೂತ್ರ ಯಾವುದೂ ಇಲ್ಲ ಭಕ್ತಿ ಮತ್ತು ಯೋಗದ ಬಗ್ಗೆ ಸುದೀರ್ಘವಾಗಿ ವಿವರಿಸಲ್ಪಟ್ಟ ಅನೇಕ ಗ್ರಂಥಗಳಿವೆ.

ಅವುಗಳೆಲ್ಲಾ ಪ್ರಸ್ಥಾನ ತ್ರಯಂನಲ್ಲಿ ಸೂಚ್ಯವಾಗಿ ಹೇಳಿದ ವಿಷಯಗಳ ವಿಸ್ತೃತ ವ್ಯಾಖ್ಯಾನಗಳು. ಪ್ರಸ್ಥಾನತ್ರಯಂ ಮತ್ತು ಇತರ ಧಾರ್ಮಿಕ ಗ್ರಂಥಗಳಲ್ಲಿ ವಿವರಿಸಿದ ವಿಷಯಗಳಲ್ಲಿ ಅರ್ಥ ಸಂದಿಗ್ಧತೆಯುಂಟಾದಾಗ ಪ್ರಸ್ಥಾನತ್ರಯ ಗ್ರಂಥದ ಪ್ರತಿಪಾದನೆಗಳೇ ಅಂಗೀಕರಿಸಲ್ಪಡುತ್ತವೆ.

ಪ್ರಸ್ಥಾನ ತ್ರಯಂನ ಮೂರು ಪವಿತ್ರ ಗ್ರಂಥಗಳಲ್ಲಿ 'ಭಗವದ್ಗೀತೆ'ಯು ಅದ್ಭುತವಾದ ಗ್ರಂಥ. ಬೇರೆ ಬೇರೆ ಪಂಥಗಳ ಎದಿರೇಟುಗಳನ್ನು ಸಮರ್ಥವಾಗಿ, ಅಧಿಕೃತವಾಗಿ ಎದುರಿಸಬಲ್ಲ ತೀರ್ಮಾನಗಳನ್ನೊಳಗೊಂಡ ಅಪೂರ್ವ ಗ್ರಂಥವೇ ಭಗವದ್ಗೀತೆ. ಮಹಾಕಾವ್ಯವಾದ ಮಹಾಭಾರತವನ್ನು ಐದನೇ ವೇದವೆಂದು ಹೇಳಲಾಗಿದೆ. ಮನುಕುಲದ ಸಾಧನೆ, ಆಶೋತ್ತರ ಮತ್ತು ನಡವಳಿಕೆಯ ಈ ಮಹಾಕಾವ್ಯದ ಪ್ರಮುಖ ಭಾಗವೇ–ಭಗವದ್ಗೀತೆ. ಭೀಷ್ಮಪರ್ವ ಅಂದರೆ ಮಹಾಭಾರತದ ೨೫ ರಿಂದ ೪೦ನೇ ಅಧ್ಯಾಯಗಳಲ್ಲಿ ಈ ವಾಖ್ಯಾನವು ಅಡಗಿದೆ. ಇದರಲ್ಲಿ ೧೮ ಅಧ್ಯಾಯಗಳೂ, ೭೦೦

ಶ್ಲೋಕಗಳೂ ಇವೆ. ಒಂದು ರೀತಿಯಲ್ಲಿ ಮಹಾಭಾರತದ ಸಂಕ್ಷಿಪ್ತ ಆಧ್ಯಾತ್ಮ ರೂಪವೇ ಭಗವದ್ಗೀತೆ. ಮಾನವ ದೇಹಕ್ಕೆ 'ಹೃದಯ'ವಿದ್ದಂತೆ ಮಹಾಭಾರತಕ್ಕೆ ಭಗವದ್ಗೀತೆ.

ಸಾವಿರಾರು ವರ್ಷಗಳಿಂದ ಭಗವದ್ಗೀತೆಯ ಮಾರ್ಗದರ್ಶನದಿಂದ ಪರಿಪೂರ್ಣ ವ್ಯಕ್ತಿತ್ವ ಸಾಧ್ಯವೆಂದು ಬಹು ಜನರ ನಂಬಿಕೆ. ಮಹಾತ್ಮಾ ಗಾಂಧೀಜಿ ತಮ್ಮ ಜೀವನದಲ್ಲಿ ಭಗವದ್ಗೀತೆಯನ್ನು ಸಂಪೂರ್ಣವಾಗಿ ನಂಬಿದ್ದರು.

ಸ್ವಾಮಿ ವಿವೇಕಾನಂದರ ಪ್ರಕಾರ 'ತಮೋ ಮತ್ತು ರಜೋಗುಣಗಳ ಪ್ರಜ್ಞೆಯಿಲ್ಲದೇ ಬದುಕುವವರು ಲೋಕದ ಉದ್ಧಾರಕ್ಕಾಗಿ ದುಡಿಯುವ ಕಾರಣ ಅವರಿಗೆ ದುಷ್ಟ ಶಕ್ತಿಗಳೇನೂ ಮಾಡಲಾರವು. ಆಸೆ–ಆಕಾಂಕ್ಷೆಗಳಿಲ್ಲದೇ, ಬಂಧನಕ್ಕೆ ಸಿಲುಕದೇ ಜೀವಿಸುವವರು ಪರಮಾನಂದವನ್ನೂ ಮುಕ್ತಭಾವವನ್ನೂ ಅನುಭವಿಸುವರು. ಕರ್ಮಯೋಗದ ಈ ರಹಸ್ಯವನ್ನೇ ಕೃಷ್ಣನು ಗೀತೆಯಲ್ಲಿ ವಿವರಿಸಿದ್ದಾನೆ.'

ಡಾ. ಕೇತವರಪು ರಾಜ್ಯಶ್ರೀ ಅವರು ಹೆಸರಾದ ಕವಯಿತ್ರಿ, ಅವರು ಗೀತೆಯ ೭೦೦ ಶ್ಲೋಕಗಳಲ್ಲಿ ೧೦೮ನ್ನು ಆಯ್ದುಕೊಂಡು 'ಗರಿಗಳು' ಛಂದಸ್ಸಿನಲ್ಲಿ ಸುಲಭವಾಗಿ ತಿಳಿಯುವಂತೆ ರಚಿಸಿದ್ದಾರೆ.

ಹಿಂದೂ ಸಂಪ್ರದಾಯದಲ್ಲಿ ೧೦೮ ಎಂಬ ಸಂಖ್ಯೆಗೂ ವಿಶೇಷ ಮಹತ್ವವಿದೆ. ಶ್ರೀ ಸಾಮಾನ್ಯರಿಗಾಗಿ ರಾಜ್ಯಶ್ರೀ ಅವರು ಗೀತೆಯ ಮುಖ್ಯ ಶ್ಲೋಕಗಳನ್ನು ಆರಿಸಿ ತೆಲುಗು ಮತ್ತು ಇಂಗ್ಲಿಷ್ ಭಾಷೆ ಅನುವಾದಿಸಿದ್ದಾರೆ. ಅವರ ಅನುವಾದವು ಸುಲಭ ಗ್ರಾಹ್ಯವಾಗಿವೆ.

ಭಗವದ್ಗೀತೆಯಂತಹ ಮಹಾಗ್ರಂಥವನ್ನು ಆಸಕ್ತಿಯಿಂದ ತೆಲುಗು ಮತ್ತು ಇಂಗ್ಲಿಷ್‌ನಲ್ಲಿ ಅನುವಾದಿಸಿ ಈ ಕಾಲದ ಯುವಕರಿಗೆ ನೀಡಿರುವುದನ್ನು ಅಭಿನಂದಿಸುತ್ತೇನೆ.

**– ಮಂಡಲಿ ಬುದ್ಧ ಪ್ರಸಾದ್**

ಉಪಸಭಾಪತಿಗಳು,

ಆಂಧ್ರಪ್ರದೇಶ ವಿಧಾನಸಭೆ, ಹೈದರಾಬಾದ್.

# ಭಗವದ್ಗೀತೆಯ ಗರಿಗಳು

◆

ಹಿಂದೂಗಳ ಪವಿತ್ರ ಗ್ರಂಥಗಳಾದ ಉಪನಿಷತ್ತುಗಳು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಯೇ ಪ್ರಸ್ಥಾನತ್ರಯಗಳು. ಆಧ್ಯಾತ್ಮ ವಿಷಯದಲ್ಲಿ ಈ ಗ್ರಂಥಗಳೇ ಹಿಂದೂಗಳಿಗೆ ಆಧಾರವಾಗಿವೆ. ಉಪನಿಷತ್ತುಗಳು ವೇದದ ಭಾಗಗಳಾಗಿವೆ ಮತ್ತು ಅನೇಕವಿವೆ. ಬ್ರಹ್ಮಸೂತ್ರಗಳು ಜಟಿಲವಾಗಿವೆ ಮತ್ತು ಸುಲಭದಲ್ಲಿ ಅರ್ಥವಾಗುವುದಿಲ್ಲ. ಮಹಾಋಷಿಗಳಿಗೆ ತಪಸ್ಸಿನಲ್ಲಿ ತೋಚಿದ ಜ್ಞಾನಕಿರಣಗಳವು.

ಉಪನಿಷತ್ತುಗಳು ಪವಿತ್ರ ಗೋಮಾತೆಯರಾದರೆ ಭಗವದ್ಗೀತೆಯು ಈ ಗೋವುಗಳು ಕರೆದ ಕ್ಷೀರ. ಅಂದರೆ ಉಪನಿಷತ್ ತತ್ವದ ಸಾರವೇ ಭಗವದ್ಗೀತೆ. ಕ್ರಿಸ್ತೀಯರಿಗೆ ಬೈಬಲ್ ಇದ್ದಂತೆ ಹಿಂದೂಗಳಿಗೆ ಭಗವದ್ಗೀತೆ.

ಕೆಲವರು ಭಗವದ್ಗೀತೆಯೂ ಒಂದು ಉಪನಿಷತ್ತು ಎಂದು ಹೇಳುತ್ತಾರೆ. ಪರಮಾತ್ಮನ ಅರಿವನ್ನು ನೀಡುವ ಬ್ರಹ್ಮ ವಿದ್ಯೆಯನ್ನು ಅದು ತಿಳಿಸುತ್ತದೆ. ಅದು ಯೋಗಶಾಸ್ತ್ರವೆಂದೂ ಹೆಸರಾಗಿದೆ.

ಭಗವದ್ಗೀತೆಯು ಕೃಷ್ಣಾರ್ಜುನ ಸಂವಾದದ ರೂಪದಲ್ಲಿದೆ. ಕುರುಕ್ಷೇತ್ರದ ರಣಾಂಗಣವೇ ಸ್ಥಳ. ಕುರು ಪಾಂಡವರು ಯುದ್ಧ ಸನ್ನದ್ಧರಾಗಿ ಸೇರಿದ್ದಾರೆ. ಪ್ರಪಂಚವೇ ಒಂದು ರಣಾಂಗಣವೆಂದೂ, ಒಳಿತು ಕೆಡುಕುಗಳ ನಡುವೆಯೇ ಯುದ್ಧವೆಂದೂ, ವಿವರಿಸಲಾಗುತ್ತದೆ. ಕೊನೆಗೆ ಒಳಿತಿಗೇ ಜಯವಾಗುತ್ತದೆ. ಆದರೆ ಜಯಸಾಧನೆಗೆ ಭಗವಂತನ ಮೊರೆ ಹೋಗಬೇಕು ಮತ್ತು ಅವನ ಮಾತಿನಂತೆ ನಡೆಯಬೇಕು.

ಭಗವದ್ಗೀತೆಯ ಪ್ರಪಂಚದಾದ್ಯಂತ ಚಿಂತನೆಯನ್ನು ಪ್ರಚೋದಿಸಿದೆ. ಅದು ಪ್ರಪಂಚದ ಅನೇಕ ಭಾಷೆಗಳಿಗೆ ಅನುವಾದವಾಗಿದೆ. ಡಾ. ಕೇತವರಪು

ರಾಜ್ಯಶ್ರೀ ಅವರು ಭಗವದ್ಗೀತೆಯನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಅವರು ತಮ್ಮ ನುಡಿಯಲ್ಲಿ ಇದನ್ನು ವಿರಿಸಿದ್ದಾರೆ. ಓದುಗರಿಗೆ ಸುಲಭವಾಗಿ ಅರ್ಥವಾಗುವಂತೆ ಮಾಡುವುದೇ ಅವರ ಉದ್ದೇಶ. ಇತ್ತೀಚೆಗೆ ರೂಪುಗೊಂಡಿರುವ ಹೊಸ ಛಂದಸ್ಸು 'ಗರಿಗಳ' ವಿಧಾನವನ್ನು ಅವರು ಅಳವಡಿಸಿದ್ದಾರೆ. ಭಗವದ್ಗೀತೆಯ ಶ್ಲೋಕಗಳಲ್ಲಿ ೧೦೮ನ್ನು ಮಾತ್ರ ಆರಿಸಿ ಅವರು ತೆಲುಗು ಮತ್ತು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

ಅನುವಾದ ಸರಳವಾಗಿದೆ, ಸಲಭ ಗ್ರಾಹ್ಯವಾಗಿದೆ. ಅವರ ಪ್ರಯತ್ನವು ಶ್ಲಾಘನೀಯವಾಗಿದೆ. ಅವರು ಅಭಿನಂದನಾರ್ಹರು. ಈಗಾಗಲೇ ತೆಲುಗಿನಲ್ಲಿ ಅವರು ರಚಿಸಿದ ಗ್ರಂಥಗಳು ಎಲ್ಲರ ಪ್ರೀತಿಗೆ ಪಾತ್ರವಾಗಿವೆ. ಅವರು ಕಾವ್ಯ ಪ್ರೇಮಿಗಳಿಗಾಗಿ ಇನ್ನಷ್ಟು ಗ್ರಂಥಗಳನ್ನು ರಚಿಸಲೆಂದು ಹಾರೈಸೋಣ.

ಹೈದರಾಬಾದ್ — **ದೀವಿ ಸುಬ್ಬಾರಾವ್**
೨೫-೦೫-೨೦೧೫ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು

# ನನ್ನ ಮಾತು

◆

ನಾನು ಸರಳವಾದ ತೆಲುಗಿನಲ್ಲಿ ಗರಿಗಳಾಗಿ ಬರೆದ 'ಗೀತಾಮೃತ'ವು ಪಂಡಿತ ಪಾಮರರಿಂದ ಮೆಚ್ಚುಗೆ ಪಡೆಯಿತು.

ಈ ಪುಸ್ತಕವು ಲಂಡನ್‌ನಲ್ಲಿ ೨೭–೦೯–೨೦೧೪ರಂದು ನಾಲ್ಕನೇ ಪ್ರಪಂಚ ತೆಲುಗು ಸಮಾವೇಶದಲ್ಲಿ ಎರಡನೆಯ ಬಾರಿಗೆ ಆವಿಷ್ಕಾರವಾಯಿತು. ಆಂಧ್ರಪ್ರದೇಶ ಉಪಮುಖ್ಯಮಂತ್ರಿ ಶ್ರೀ ಕೆ. ಇ. ಕೃಷ್ಣಮೂರ್ತಿ, ಆಂ. ಪ್ರ. ವಿಧಾನಸಭೆಯ ಉಪಸಭಾಪತಿ ಶ್ರೀ ಮಂಡಲಿ ಬುದ್ಧ ಪ್ರಸಾದ್, ಶ್ರೀ ವಂಗೂರಿ ಚಿಟ್ಟನ್‌ರಾಜು, ಕಿಳ್ಳಿ ಸತ್ಯಪ್ರಸಾದ್, ಯಾರ್ಲಗಡ್ಡ ಲಕ್ಷ್ಮೀಪ್ರಸಾದ್, ತಣಿಕೆಳ್ಳ ಭರಣಿ ಮತ್ತಿತರ ಸಾಹಿತೀವೇತ್ತರು ವೇದಿಕೆಯನ್ನು ಅಲಂಕರಿಸಿದ್ದರು.

ಹೈದರಾಬಾದಿನ ಯೋಗ ವಿಜ್ಞಾನ ಅಕಾಡೆಮಿಯವರು ನನಗೆ–ವೇದಾಂತ ವಕ್ತ–ಎಂಬ ಬಿರುದು ನೀಡಿ ಸನ್ಮಾನಿಸಿದರು.

೨೦೧೪ರ ನವೆಂಬರನಲ್ಲಿ ನನ್ನ ಮಗಳು ಪ್ರಿಯಾಂಕಳ ಹೆರಿಗೆಗಾಗಿ ನಾನು ಅಮೇರಿಕೆಯ ನ್ಯೂಜೆರ್ಸಿಗೆ ಹೋಗಿದ್ದೆ. ಅಲ್ಲಿನ ನನ್ನ ಸ್ನೇಹಿತರು ಮತ್ತು ಹಿತೈಷಿಗಳಾದ ಪ್ರಸಿದ್ಧ ಕವಿ ಡಾ. ತಿರುನಗರಿ, ಡಾ. ಮಧುಸೂದನ್ ಮುಂತಾದವರು. ನನ್ನ ಸಮಯವನ್ನು ಸಾಹಿತ್ಯಕ್ಕೆ ಮೀಸಲಿಡಬೇಕೆಂದು ಒತ್ತಾಯಿಸಿದರು. ಡಾ. ಮಧುಸೂದನ್ ಅವರು **ಗೀತಾಮೃತ**ವನ್ನು ಇಂಗ್ಲಿಷ್‌ಗೆ ಅನುವಾದಿಸಬೇಕೆಂದು ಹೇಳಿದರು. ಅವರು ನನಗೆ ಗುಂಟೂರಿನ ಶ್ರೀ ವೈದ್ಯುಲ ಶ್ರೀನಿವಾಸರಾಯರು. (ಪ್ರಸಿದ್ಧ ಕವಿ, ಕಕೋರ) ಅವರ ಪರಿಚಯ ಮಾಡಿಸಿದರು. ಡಾ. ಮಧುಸೂದನ ಅವರಿಗೆ ನಾನು ಕೃತಜ್ಞಳಾಗಿದ್ದೇನೆ.

ನಾನು ಗುಂಟೂರಿನ ಶ್ರೀ ವೈದ್ಯುಲ ಶ್ರೀನಿವಾಸರಾಯರ ಸಂಪರ್ಕ ಮಾಡಿದೆನು. ಅವರು ನನಗೆ ಗೀತಾಮೃತ–ಇಂಗ್ಲೀಷ್‌ಗೆ ಭಾಷಾಂತರ ಮಾಡಲು ನೆರವಾದರು. ಅವರೊಂದಿಗೆ ಚರ್ಚಿಸಿ, ಅರ್ಥಗ್ರಹಿಸಿ ಅನುವಾದ ಮಾಡಿದೆನು. ಅವರ ನೆರವು ಆಸಕ್ತಿಗೆ ನಾನು ಕೃತಜ್ಞಳಾಗಿದ್ದೇನೆ.

ನ್ಯೂಜೆರ್ಸಿಯಲ್ಲಿರುವಾಗ ಹೆಚ್ಚಿನ ಸಮಯವನ್ನು ಗೀತಾಮೃತದ ಇಂಗ್ಲಿಷ್ ಅವತರಣಿಕೆಯಲ್ಲಿ ಕಳೆದೆನು. ಭಗವದ್ಗೀತೆಯನ್ನು ಹಲವಾರು ಜನ ಇಂಗ್ಲಿಷ್‌ಗೆ ಅನುವಾದ ಮಾಡಿದ್ದರು. ನಾನು ೧೦೮ ಶ್ಲೋಕಗಳಲ್ಲಿ ಭಗವದ್ಗೀತೆಯ ತಿರುಳನ್ನು ನೀಡಿದ್ದೇನೆ.

ಆಂಧ್ರಪ್ರದೇಶ ವಿಧಾನಸಭೆಯ ಉಪಸಭಾಪತಿಗಳಾದ ಸನ್ಮಾನ್ಯ ಶ್ರೀ ಮಂಡಲಿ ಬುದ್ಧಪ್ರಸಾದ್ ಅವರಿಗೂ, ಶ್ರೀ ದೀವಿ ಸುಬ್ಬರಾವ್ ಅವರಿಗೂ ಡಾ. ಕೆ. ವಿ. ರಮಣಾಚಾರಿ IAS ಅವರಿಗೂ ನಾನು ಆಭಾರಿ.

'ಗರಿಗಳು' ಛಂದಸ್ಸಿನ ಆವಿಷ್ಕರ್ತ ಶ್ರೀ ಸುಗಂಬಾಬು ಅವರು ನೀಡಿದ ಪ್ರೋತ್ಸಾಹ ಅವಿಸ್ಮರಣೀಯ.

ನನ್ನ ಮೊಮ್ಮಗ ಅಕ್ಷರ ತನ್ನ ಮುಗ್ಧ ನಗುವಿನಿಂದ ನನ್ನ ಉಲ್ಲಾಸದಿಂದಿಟ್ಟು ಪ್ರೋತ್ಸಾಹಿಸಿದನು. ಅವನಿಗೂ ನಾನು ಋಣಿ.

– ರಾಜ್ಯಶ್ರೀ

# ಧರ್ಮಾಮೃತ

◆

ಭಗವದ್ಗೀತೆಯು ಭಾರತೀಯ ವೇದಾಂತಸಾರ. ಕರ್ಮ, ಜ್ಞಾನ, ಭಕ್ತಿ, ಧ್ಯಾನ ಧಾರೆಗಳ ತ್ರಿವೇಣೀ ಸಂಗಮವಾದ ಗೀತೆ ಆಚರಣಾತ್ಮಕ ತತ್ವ ಆದ್ದರಿಂದ ಶ್ರೀ ಕೃಷ್ಣನ ಉಪದೇಶವಾದ ಗೀತೆಗೆ ಆಧ್ಯಾತ್ಮಿಕ ಪ್ರಪಂಚದಲ್ಲಿ ಗುರುಸ್ಥಾನವಿದೆ. ವಿವಿಧ ಭಾಷಾನುವಾದ, ವ್ಯಾಖ್ಯಾನಗಳಿಂದ ವಿಶ್ವವ್ಯಾಪಿಯಾಗಿದೆ.

ಜರಾಮರಣಗಳು ದುಃಖಭಾಜಕಗಳು. ಮಾನವ ಜೀವನದಲ್ಲಿ ತಲೆಯೆತ್ತುವ ಶೋಕಗ್ರಸ್ತ ಸಮಸ್ಯೆಗಳ ನಿವಾರಣೆಗೆ ಪರಿಹಾರ ಸೂಚಿಸಿ ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ದಾರಿ ತೋರುವುದು ಗೀತೆ. ನಾನು ಅಲ್ಪನೆಂಬ ಭ್ರಾಂತಿಯಿಂದ ವಿಮುಕ್ತಿ ನೀಡಿ ಬದುಕಿನ ದಾರಿಗೆ ನೆರವಾಗುತ್ತದೆ. ಕಿಂಕರ್ತವ್ಯ ಮೂಢನಾದ ನರನು ನಾರಾಯಣನ ಉಪದೇಶದಿಂದ ಸಮಸ್ಯಾ ಸೋಪಾನಗಳನ್ನು ದಾಟಿ ಪರಿಪೂರ್ಣನಾಗುತ್ತಾನೆ.

ಗೀತೆಯ ತತ್ವಗಳನ್ನು ಸಾರುವ ೧೦೮ ಶ್ಲೋಕಗಳನ್ನು ಆರಿಸಿ ಕವಯಿತ್ರಿ ಕೇತವರಪು ರಾಜ್ಯಶ್ರೀ ಗೀತಾ ಮಾಧುರ್ಯವನ್ನು ತಿಳಿಸುತ್ತಾರೆ. ಮೂಲದಲ್ಲಿಯ ಭಾವವನ್ನು ಪಠನ ಮಾಡುವವರಿಗೆ ಕರತಲಾಮಲಕ ಮಾಡಿದ್ದಾರೆ.

'ವಾಸಾಂಸಿ ಜೀರ್ಣಾನಿ ಯಥಾ ವಿಹಾಯ'

ಚಿರಿಗಿನ ವಸ್ತ್ರಂವದಿಲಿ
ನೂತನ ವಸ್ತ್ರಂ ಧರಿಂಚಿನಟ್ಲು
– ಎಂದೂ

ಸದ್ಯ : ಕಾಲದಲ್ಲಿ ಕಾವ್ಯರಸಿಕರನ್ನು ಆಕರ್ಷಿಸಿದ ಕಾವ್ಯರೂಪ **'ಗರಿಗಳು'** ಈ ಛಂದಸ್ಸಿಗೆ ಸುಗಂಬಾಬು ಮಾರ್ಗದರ್ಶನದಲ್ಲಿ ಅನೇಕರು ಪಯಣಿಸುತ್ತಿದ್ದಾರೆ. ಅದಕ್ಕೆ ಸಾಕ್ಷಿ ಡಾ. ಕೇತವರಪು ರಾಜ್ಯಶ್ರೀ ಅವರ 'ಗೀತಾಮೃತಂ', 'ಮಹಾಭಾರ ಮಣಿದೀಪ' ವಾದ ಭಗವದ್ಗೀತೆಯ 'ಧರ್ಮಾಮೃತ'ವನ್ನು ಆಸ್ವಾದಯೋಗ್ಯವಾಗಿ, ಸರಳಸುಂದರ ಹೃದ್ಯವಾದ ಶೈಲಿಯಲ್ಲಿ ಸೃಜಿಸಿದ ರಚಯಿತ್ರಿಗೆ ಮನಸಾರಾ ಅಭಿನಂದಿಸುತ್ತೇನೆ. ಅವರು ಮತ್ತಷ್ಟು ಎತ್ತರಕ್ಕೆ ಬೆಳೆಯಲೆಂದು ಹಾರೈಸುತ್ತೇನೆ.

**– ಆಚಾರ್ಯ ಎಸ್. ವಿ. ರಾಮರಾವು**
ನಿವೃತ್ತ ತೆಲುಗು ಪ್ರಾಧ್ಯಾಪಕರು ಮತ್ತು ಡೀನ್
ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ್.

ಇದನ್ನು ಮೊದಲು 'ಗರಿಗಳ ಛಂದಸ್ಸಿನ್ಲಿ ಬರೆಯುಲು ಪ್ರೋತ್ಸಾಹಿಸಿದವರು ಈ ಛಂದಸ್ಸನ್ನು ರೂಪಿಸಿದ ಶ್ರೀ ಎಂ. ಕೆ. ಸುಗಂಬಾಬು ಅವರಿಗೆ ನನ್ನ ಕೃತಜ್ಞತೆಗಳು. ಗರಿಗಳಲ್ಲಿ ಗೀತಾಮೃತವು ತೆಲುಗಿನಲ್ಲಿ ವಿಶೇಷ ಜನಪ್ರಿಯವಾದ ಕಾರಣ ಅದನ್ನು ಇಂಗ್ಲಿಷ್‌ನಲ್ಲಿ ಅನುವಾದಿಸಲಾಯಿತು.

ಈ ಕೃತಿಯನ್ನು ಸಾಮಾನ್ಯರೂ ಓದಿ ಆಸ್ವಾದಿಸಬಲ್ಲರಾದ ಕಾರಣ ಇದನ್ನು ಇತರ ಭಾರತೀಯ ಭಾಷೆಗಳಿಗೂ ಅನುವಾದಿಸಬೇಕೆಂದು ಸುಗಂಬಾಬು ಅವರು ಸೂಚಿಸಿದರು. ಕನ್ನಡಕ್ಕೆ ಅನುವಾದಿಸಬೇಕೆಂದು ಯೋಚಿಸಿದಾಗ ಶ್ರೀ ಗುರುಮೂರ್ತಿ ಅವರ ಪರಿಚಯವಾಯಿತು. ಅದರಂತೆ ಅವರಿಗೆ 'ಗೀತಾಮೃತ'ವನ್ನು ಕಳಿಸಿದಾಗ ಅವರ ಪರಿಚಯವಾಯಿತು. ಅದರಂತೆ ಅವರಿಗೆ 'ಗೀತಾಮೃತ'ವನ್ನು ಕಳಿಸಿದಾಗ ಅವರು ಅದನ್ನು ಓದಿ ಅನಂತರ ಅಂಗೀಕರಿಸಿದರು. ಬಹುಭಾಷಾಕೋವಿದರಾದ ಅವರು ಬೇಗ ಗೀತಾಮೃತವನ್ನು ಕನ್ನಡಾನುವಾದ ಮಾಡಿದರು. ಅದನ್ನು ಮುದ್ರಿಸುವ ವ್ಯವಸ್ಥೆಯನ್ನು ಅವರು ವಹಿಸಿದರು. ನನಗೆ ತುಂಬಾ ಸಂತೋಷವಾಯಿತು.

ಅವರ ಅಮೂಲ್ಯ ಕೃಪೆಗೆ ನನ್ನ ಕೃತಜ್ಞತೆಗಳು. ಕನ್ನಡ ಸಾರಸ್ವತ ಲೋಕವು ಈ ಕೃತಿಯನ್ನು ಸ್ವಾಗತಿಸುತ್ತವೆಂದು ಭಾವಿಸುತ್ತೇನೆ.

**– ಡಾ. ಕೇತವರಪು ರಾಜ್ಯಶ್ರೀ**

ಇದನ್ನು ಮೊದಲು 'ಗರಿಗಳ ಛಂದಸ್ಸಿನ್ಲಿ ಬರೆಯಲು ಪ್ರೋತ್ಸಾಹಿಸಿದವರು ಈ ಛಂದಸ್ಸನ್ನು ರೂಪಿಸಿದ ಶ್ರೀ ಎಂ. ಕೆ. ಸುಗಂಬಾಬು ಅವರಿಗೆ ನನ್ನ ಕೃತಜ್ಞತೆಗಳು. ಗರಿಗಳಲ್ಲಿ ಗೀತಾಮೃತವು ತೆಲುಗಿನಲ್ಲಿ ವಿಶೇಷ ಜನಪ್ರಿಯವಾದ ಕಾರಣ ಅದನ್ನು ಇಂಗ್ಲಿಷ್‌ನಲ್ಲಿ ಅನುವಾದಿಸಲಾಯಿತು.

ಈ ಕೃತಿಯನ್ನು ಸಾಮಾನ್ಯರೂ ಓದಿ ಆಸ್ವಾದಿಸಬಲ್ಲರಾದ ಕಾರಣ ಇದನ್ನು ಇತರ ಭಾರತೀಯ ಭಾಷೆಗಳಿಗೂ ಅನುವಾದಿಸಬೇಕೆಂದು ಸುಗಂಬಾಬು ಅವರು ಸೂಚಿಸಿದರು. ಕನ್ನಡಕ್ಕೆ ಅನುವಾದಿಸಬೇಕೆಂದು ಯೋಚಿಸಿದಾಗ ಶ್ರೀ ಗುರುಮೂರ್ತಿ ಅವರ ಪರಿಚಯವಾಯಿತು. ಅದರಂತೆ ಅವರಿಗೆ 'ಗೀತಾಮೃತ'ವನ್ನು ಕಳಿಸಿದಾಗ ಅವರ ಪರಿಚಯವಾಯಿತು. ಅದರಂತೆ ಅವರಿಗೆ 'ಗೀತಾಮೃತ'ವನ್ನು ಕಳಿಸಿದಾಗ ಅವರು ಅದನ್ನು ಓದಿ ಅನಂತರ ಅಂಗೀಕರಿಸಿದರು. ಬಹುಭಾಷಾಕೋವಿದರಾದ ಅವರು ಬೇಗ ಗೀತಾಮೃತವನ್ನು ಕನ್ನಡಾನುವಾದ ಮಾಡಿದರು. ಅದನ್ನು ಮುದ್ರಿಸುವ ವ್ಯವಸ್ಥೆಯನ್ನು ಅವರು ವಹಿಸಿದರು. ನನಗೆ ತುಂಬಾ ಸಂತೋಷವಾಯಿತು.

ಅವರ ಅಮೂಲ್ಯ ಕೃಪೆಗೆ ನನ್ನ ಕೃತಜ್ಞತೆಗಳು. ಕನ್ನಡ ಸಾರಸ್ವತ ಲೋಕವು ಈ ಕೃತಿಯನ್ನು ಸ್ವಾಗತಿಸುತ್ತವೆಂದು ಭಾವಿಸುತ್ತೇನೆ.

**– ಡಾ. ಕೇತವರಪು ರಾಜ್ಯಶ್ರೀ**

ಅವರು ಭಗವದ್ಗೀತೆಯನ್ನು ಅನೇಕ ಸಲ ಓದಿ ; ಅನುವಾದಗಳನ್ನು ಪರಿಶೀಲಿಸಿದಂತೆ ತೋರುತ್ತದೆ.

ಪದ್ಯವಾಗಲೀ, ಗೇಯವಾಗಲೀ, ವಚನವಾಗಲೀ ಕವಿತ್ವವೆಂದರೆ ಕವಿತ್ವವೇ. ಅದು ಆಸ್ವಾದಯೋಗ್ಯವಾಗಿ, ಅಂತಶ್ಚೇತನಕೆ ಕಾರಣವಾಗಬೇಕು.

ಇಲ್ಲಿಯ ವಸ್ತು ಸನಾತನ, ಪ್ರಕ್ರಿಯೆ ಆಧುನಿಕವಾದುದು. ರಾಜ್ಯಶ್ರೀ ಅವರ ಅನುವಾದವು ಸುಂದರವಾಗಿ, ಶುಭಕರವಾಗಿ ಸುಕುಮಾರವಾಗಿ, ಸಹೃದಯವೇದ್ಯವಾಗಿದೆ. ರಾಜ್ಯಶ್ರೀ ಅವರು ಇಂತಹ ಅನೇಕ ಕೃತಿಗಳನ್ನು ನಮಗೆ ಕೊಡಲಿ. ಅವರಿಗೆ ಹಾರ್ದಿಕ ಶುಭಾಶಯಗಳು.

**– ಆಚಾರ್ಯ ಮಸನ ಚೆನ್ನಪ್ಪ**
ತೆಲುಗು ವಿಭಾಗ ಮುಖ್ಯಸ್ಥರು
ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ್

# ದೈವಂ ಮಾನುಷರೂಪೇಣ

◆

ಭಗವಂತನು ಮನುಷ್ಯನ ಮುಖಾಂತರ ತನ್ನ ಅಸ್ತಿತ್ವವನ್ನು ಸಾರಿದ್ದಾನೆ. ಅದರಂತೆ ಸಾಹಿತ್ಯದ ಮೂಲಕ ಆತನೇ ತನ್ನ ಸ್ವರೂಪವನ್ನು ತಿಳಿಸಿದ್ದಾನೆ. ಸಾಹಿತ್ಯವನ್ನು ಬದಿಗಿರಿಸಿದರೆ 'ದೇವರು' ಎಂಬ ಪದಕ್ಕೆ ಅರ್ಥವೇ ಇಲ್ಲ.

'ಗರಿಗಳು' ಛಂದಸ್ಸಿನಲ್ಲಿ ಮೂರನೇ ಪ್ರಯೋಗವೇ ರಾಜ್ಯಶ್ರೀ ಅವರ 'ಗೀತಾಮೃತಂ'. ವೇದವ್ಯಾಸರು ಶ್ರೀಕೃಷ್ಣನ ಮುಖಾಂತರ ಗೀತಾಬೋಧೆ ಮಾಡಿದನೇ ? ಶ್ರೀಕೃಷ್ಣನ ಬೋಧೆಯನ್ನು ವೇದವ್ಯಾಸರು ರಚಿಸಿದರಾ ? ಎಂಬ ವಿವಾದವೇ ಇಲ್ಲ.

ಗೀತೆಯು ಯಾರಿಂದಲೇ ಪರಿವ್ಯಾಪ್ತವಾಗಿರಲಿ, ಅದು ನೀಡಿದ ತಾತ್ವಿಕ ಭೂಮಿಕೆಯು ದೊಡ್ಡ ಬಲವನ್ನು ನೀಡಿತು. ಯಾರ ನಂಬಿಕೆ ಏನೇ ಇರಲಿ, ಪ್ರಪಂಚದ ಸಾಹಿತ್ಯದಲ್ಲಿ ಅದ್ಭುತವಾದ, ಅನನ್ಯವಾದ ಕಾವ್ಯವೆಂದರೆ 'ಮಹಾಭಾರತ'. ಅದರಲ್ಲಿ ಅತ್ಯಂತ ಪ್ರಧಾನವಾದುದು ಪರಮಾತ್ಮನನ್ನು ನಿರೂಪಿಸುವ ಪ್ರಯತ್ನ.

ಕುರುಕ್ಷೇತ್ರ ಯುದ್ಧಾರಂಭದಲ್ಲಿ ಸ್ವಜನರೊಂದಿಗೆ ಸೆಣಸುವುದೇ ಎಂದು ಅರ್ಜುನನು ಧನುರ್ಬಾಣಗಳನ್ನು ನೆಲಕಿಟ್ಟು ವಿರಕ್ತಿಯನ್ನು ಪ್ರಕಟಿಸಿದಾಗ, ಶ್ರೀಕೃಷ್ಣನು ತನ್ನ ಅಮಿತ ಶಕ್ತಿಯುಕ್ತಿಗಳನ್ನು ಪ್ರದರ್ಶಿಸಿ ಗೀತಾಬೋಧೆ ಮಾಡಿದ್ದಲ್ಲದೇ 'ವಿಶ್ವರೂಪ'ವನ್ನು ತೋರಿಸಿದನು.

ರಾಮಾಯಣ, ಭಾರತಗಳು ನಮ್ಮ ಜನರ ಜೀವನದಲ್ಲಿ ಆಳವಾಗಿ ಬೇರೂರಿರುವ ಕಾವ್ಯಗಳು, ಆಕ್ಷೇಪಿಸುವುದಾಗಲೀ, ಪ್ರಶಂಸಿಸುವುದಾಗಲೀ ಈಗ ಯಾರೂ ಮಾಡಬೇಕಾಗಿಲ್ಲ ಎಂದು ನನ್ನ ಅಭಿಮತ.

ಮೊದಲನೇದಾಗಿ ಗರಿಗಳಲ್ಲಿ ಗೀತಾಮೃತ ರಚಿಸಿದ ರಾಜ್ಯಶ್ರೀ ಅವರಿಗೆ ಅಭಿನಂದನೆಗಳು ಧರ್ಮಗ್ರಂಥವಾಗಿ ವಿಶ್ವವ್ಯಾಪಿಯಾಗಿ ಜನಜನಿತವಾಗಿರುವ 'ಗೀತೆ'ಯನ್ನು ಅವರು ಗರಿಗಳಾಗಿ ಹಾರಿಸಿದುದು ನನಗೆ ಮಹದಾನಂದದ ವಿಷಯ.

ಈ ಮೊದಲು ಶ್ರೀ ಪಿ. ವೀರಾರೆಡ್ಡಿ ಅವರು 'ಚಾಣಕ್ಯನೀತಿ'ಯನ್ನೂ ಈಚೆಗೆ ಶ್ರೀ ಪಿ. ಹನುಮಂತರಾವು ಅವರು ಟ್ಯಾಗೋರರ 'ಗೀತಾಂಜಲಿ'ಯನ್ನು ಗರಿಗಳಲ್ಲಿ ಮೂಡಿಸಿದ್ದು. ಈಗ ರಾಜ್ಯಶ್ರೀ ಅವರು ಗೀತೆಯನ್ನು ಗರಿಗಳಾಗಿ ರಚಿಸಿದ್ದು, ಆ ಛಂದಸ್ಸಿನ ಸಾಮರ್ಥ್ಯವನ್ನು, ಸಮಗ್ರತೆಯನ್ನು ಸಾರುವ ವಿಷಯವೆಂದು ನನ್ನ ಭಾವನೆ ಅದು ನನಗೆ ಹೆಮ್ಮೆಯ ವಿಷಯವಾಗಿದೆ. ಇನ್ನು ಗರಿಗಳಲ್ಲಿ ಒಂದು ಕಾವ್ಯವು ಬರಬೇಕೆಂದು ಆಶಿಸಿದ ಆಚಾರ್ಯ ಮಸನ ಚೆನ್ನಪ್ಪ ಅವರಿಗೆ ಅವರಾಶೆ ಈಡೈರಲಿದೆಯೆಂದು ಸವಿನಯವಾಗಿ ತಿಳಿಸಬಯಸುತ್ತೇನೆ.

ಕೃಷ್ಣನ ಶ್ಲೋಕಗಳಿಗೆ ರಾಜ್ಯಶ್ರೀ ಅವರು ನೀಡಿರುವುದಕ್ಕಿಂತ ಹೆಚ್ಚಿನ ವಿವರಣೆಯಾಗಲೀ, ವ್ಯಾಖ್ಯಾನವಾಗಲೀ ಬೇಕಿಲ್ಲ. ಗಗನವನ್ನು ಮೀರಿ ಹಾರುವುದೆಂದರೆ ಇದೇ. ಇದು ಗರಿಗಳಿಗೆ ಮಾತ್ರ ಸಾಧ್ಯ.

ಶುಭ ಹಾರೈಕೆಗಳು.

**– ಎಂ. ಕೆ. ಸುಗಂಬಾಬು**
'ಗರಿಗಳು' ರೂಪಶಿಲ್ಪಿ
ಹೈದರಾಬಾದ್

## ಪುಸ್ತಕ ದಾನ

◆

ಭಾರತಭಾಷಾ ಭೂಷಣ

**ಡಾ. ಕೇತವರಪು ರಾಜ್ಯಶ್ರೀ**

ಹೈದರಾಬಾದ, ತೆಲಂಗಾಣರಾಜ್ಯ

# ಕೃತಜ್ಞತೆಗಳು

◆

ಗರಿಗಳ ಛಂದಸ್ಸಿನಲ್ಲಿ **ಗೀತಾಮೃತ** ರಚಿಸಿದ
ಡಾ. ಕೇತವರಪು ರಾಜ್ಯಶ್ರೀ ಅವರಿಗೂ,
ಈ ತೆಲುಗು ಕೃತಿಯನ್ನು ಕನ್ನಡಾನುವಾದ
ಮಾಡಬೇಕೆಂದು ಸೂಚಿಸಿದ
ಶ್ರೀ ಸುಗಂಬಾಬು ಅವರಿಗೂ,
ಈ ಕೃತಿಯ ಮುದ್ರಣ ವೆಚ್ಚವನ್ನು ಭರಿಸಲು
ಅಂಗೀಕರಿಸಿದ
ಡಾ. ಕೇತವರಪು ರಾಜ್ಯಶ್ರೀ ಅವರಿಗೂ
ನಾನು ಕೃತಜ್ಞ.
ಎಂದಿನಂತೆ ಸುಂದರವಾಗಿ ಮುದ್ರಿಸಿದ
ಮಿತ್ರ ಶಾಂತವೀರ ಜಂಗಮನಿ,
ಪ್ರಭು ಗ್ರಾಫಿಕ್ಸ್, ಗದಗ ಅವರಿಗೆ ನನ್ನ ನೆನಕೆಗಳು.

**– ಗುರುಮೂರ್ತಿ ಪೆಂಡಕೂರು**

# ಹಿನ್ನೆಲೆ

◆

ಕುರುಕ್ಷೇತ್ರ ರಣರಂಗದಲ್ಲಿ
ಕದನ ಕುತೂಹಲರಾಗಿ ಸಮಾವೇಶಗೊಂಡ
ಸ್ವಜನರೆಲ್ಲರನು ನೋಡಿ
ಯಾರಿಗಾಗಿ ಈ ರಾಜ್ಯವನ್ನೂ ವೈಭೋಗವನ್ನು
ಸುಖವನ್ನೂ ಬಯಸಿದನೋ
ಅವರೊಂದಿಗೆ ಯುದ್ಧ ಮಾಡಲು ಮನಸೊಪ್ಪದೆ
ಮೂರು ಲೋಕಗಳ ಆಧಿಪತ್ಯ ದೊರೆತರೂ ಕೂಡಾ
ಸ್ವಜನರನ್ನು ಕೊಲ್ಲಲಾರೆ ಎನುತ್ತಾ,
ಆರ್ದ್ರ ಹೃದಯಿಯಾದ ಅರ್ಜುನನು
ಶ್ರೀಕೃಷ್ಣನನ್ನು ಹೀಗೆ
ಕೇಳುತ್ತಾನೆ :

೧. ಅರ್ಜುನ :

ಕೃಷ್ಣಾ ! ಸ್ವಜನರನ್ನೇ ವಧಿಸಿ
ಸಂಪಾದಿಸಿದ ಗೆಲುವು
ರಾಜ್ಯ, ವೈಭೋಗ
ಏತಕೀ ಬದುಕು ?
ನೋವಿನಲ್ಲೂ
ಚಿಂತನೆ !

೨. ಭಗವಾನ :

ಅರ್ಜುನಾ ! ದುಃಖಿಸಬೇಡ
ಜನನ ಮರಣಗಳಿಗೆ
ಪಂಡಿತರೂ
ಅತೀತರು
ನಿರಾಶೆಯಿಂದ
ನಿರ್ವೀರ್ಯತೆ

೩. ಹಳೆಯ ಉಡುಗೆಯ ತೊರೆದು
ಹೊಸ ಉಡುಗೆ ಧರಿಸಿದಂತೆ
ಹೊಸ ಕಾಯದಲ್ಲಿ
ಆತ್ಮ ಪ್ರವೇಶ
ಶರೀರವು
ನಶ್ವರವಲ್ಲವೇ ?

೪. ಶಸ್ತ್ರಗಳು ಛೇದಿಸಲಾಗದ
ಬೆಂಕಿಯು ಸುಡಲಾಗದ
ನೀರು ತೋಯಿಸಲಾಗದ
ಗಾಳಿ ಒಣಗಿಸಲಾಗದ
ಅತೀತವಾದುದೇ
ಆತ್ಮ

೫. ಜನನ
ಮರಣ
ಪುನರ್ಜನ್ಮ
ತಪ್ಪುದಲ್ಲವೇ ?
ಅನಿವಾರ್ಯಕೆ
ಅಳಲೇಕೆ ?

೬ ಸ್ವಧರ್ಮದಲ್ಲಿ
ಅನುಮಾನಬೇಡ
ಸಮರವೇ
ಕ್ಷತ್ರಿಯ ಧರ್ಮ
ಧರ್ಮೋ ರಕ್ಷತಿ
ರಕ್ಷಿತಃ

೭. ಸಮರದಲ್ಲಿ ವೀರಮರಣ
ಸ್ವರ್ಗವನ್ನೂ
ಗೆಲುವು
ರಾಜ್ಯವನ್ನೂ ನೀಡುತ್ತದೆ.
ಅನಿವಾರ್ಯವಲ್ಲವೇ
ಕರ್ತವ್ಯ

೮. ಭಾವಾವೇಶಗಳನ್ನು
ಜಯಾಪಜಯಗಳನ್ನು ಬಿಡು
ಸಮಭಾವದಿಂದ
ವೀರವಿಹಾರ ಮಾಡು
ಪಾಪ ಸೋಂಕುವುದಿಲ್ಲ
ನಿರ್ವಿಕಾರವೇ
ನಿಶ್ಚಿಂತೆ

೯. ಪ್ರತಿಫಲಾಪೇಕ್ಷೆಯಿಂದ
ಕರ್ಮ ನಿರತನಾಗಬೇಡ
ಹಾಗೆಂದು
ಕರ್ಮದೂರನಾಗಬೇಡ
ಕರ್ಮಾನುಸರಣೆಯೇ
ಕರ್ತವ್ಯ

೧೦. ದುಃಖದಿಂದ ಕುಗ್ಗಬೇಡ
ಸುಖದಿಂದ ಹಿಗ್ಗಬೇಡ
ಸಂಯಮದಿಂದಿರುವವನೇ
ಸ್ಥಿತಪ್ರಜ್ಞ
ರಾಗದ್ವೇಷಗಳಿಗತೀತವಾದುದೇ
ಚಿದಾನಂದ ಸ್ವರೂಪ

೧೧. ವಿಷಯವಾಸನೆಯಿಂದಲೇ
ಆಸಕ್ತಿ
ಅದರಿಂದ ಆಶೆ
ಕ್ರೋಧ
ಕಾಮನೆಗಳೆಂದರೆ
ಲಗಾಮಿಲ್ಲದ ಕುದುರೆಗಳು

೧೨. ಕೋಪದಿಂದ ಅವಿವೇಕ
ಅವಿವೇಕದಿಂದ ಮತಿಭ್ರಮಣೆ
ಅದರಿಂದ ದುಷ್ಟಾಲೋಚನೆ
ಸರ್ವನಾಶ
ಹಂತಹಂತವಾಗಿ
ಪತನ

೧೩. ಎಷ್ಟು ನದಿಗಳು ಸಂಗಮಿಸಿದರೂ
ಸಮುದ್ರವು ಎಲ್ಲೆ ಮಿಾರುವುದಿಲ್ಲ
ಕಾಮನೆಗಳು ಕಾಡಿದರೂ
ಸ್ಥಿರವಾಗಿರುವವನೇ
ಸ್ಥಿತಪ್ರಜ್ಞ
ಮೋಹರಹಿತನೇ
ಮುಮುಕ್ಷು

೧೪. ಜ್ಞಾನಿಗಳು
ಮೋಹವಶರಾಗುವುದಿಲ್ಲ
ಬ್ರಹ್ಮಪದವೇ
ಜ್ಞಾನಫಲ
ಅಖಂಡ ಜ್ಯೋತಿಯೇ
ಬ್ರಾಹ್ಮೀ ಸ್ಥಿತಿ

೧೧. ವಿಷಯವಾಸನೆಯಿಂದಲೇ
ಆಸಕ್ತಿ
ಅದರಿಂದ ಆಶೆ
ಕ್ರೋಧ
ಕಾಮನೆಗಳೆಂದರೆ
ಲಗಾಮಿಲ್ಲದ ಕುದುರೆಗಳು

೧೨. ಕೋಪದಿಂದ ಅವಿವೇಕ
ಅವಿವೇಕದಿಂದ ಮತಿಭ್ರಮಣೆ
ಅದರಿಂದ ದುಷ್ಟಾಲೋಚನೆ
ಸರ್ವನಾಶ
ಹಂತಹಂತವಾಗಿ
ಪತನ

೧೩. ಎಷ್ಟು ನದಿಗಳು ಸಂಗಮಿಸಿದರೂ
ಸಮುದ್ರವು ಎಲ್ಲೆ ಮೀರುವುದಿಲ್ಲ
ಕಾಮನೆಗಳು ಕಾಡಿದರೂ
ಸ್ಥಿರವಾಗಿರುವವನೇ
ಸ್ಥಿತಪ್ರಜ್ಞ
ಮೋಹರಹಿತನೇ
ಮುಮುಕ್ಷು

೧೪. ಜ್ಞಾನಿಗಳು
ಮೋಹವಶರಾಗುವುದಿಲ್ಲ
ಬ್ರಹ್ಮಪದವೇ
ಜ್ಞಾನಫಲ
ಅಖಂಡ ಜ್ಯೋತಿಯೇ
ಬ್ರಾಹ್ಮೀ ಸ್ಥಿತಿ

೧೫. ಸಾಂಖ್ಯರಿಗೆ ಜ್ಞಾನಯೋಗ
ಯೋಗಿಗಳಿಗೆ ಕರ್ಮಯೋಗ
ಎಂದು ಎರಡು ವಿಧವೆಂದು
ಮೊದಲು ನಾನೇ ವಿವರಿಸಿದ್ದೇನೆ
ಎರಡೂ
ಮುಕ್ತಿ ಮಾರ್ಗಗಳೇ

೧೬. ಮಳೆಯಿಂದ ಅನ್ನ
ಯಜ್ಞದಿಂದ ಮಳೆ
ಕರ್ಮಗಳಿಂದಲೇ ಯಜ್ಞ
ಅನ್ನವೇ ಸಕಲ ಜೀವಾಧಾರ
ಕರ್ಮಾನುಷ್ಠಾನವೇ
ಸೃಷ್ಟಿ ಚಕ್ರದ ಮೂಲ

೧೭. ಕರ್ಮ ಚಕ್ರವನ್ನು
ಅತಿಕ್ರಮಿಸುವವನು
ಇಂದ್ರಿಯಲೋಲ
ಪಾಪಾತ್ಮ
ಎದುರಿಸುವುದು
ಅಪಾಯಕಾರಿ

೧೮. ಉತ್ತಮರ ಕರ್ಮಗಳು
ಉಳಿದವರಿಗೆ ದಾರಿದೀಪ
ಅವರ ಹಿಂದೆಯೇ
ಲೋಕದ ಪಯಣ
ಒಳ್ಳೆಯ ಬೀಜಗಳಿಂದ
ಫಲಪುಷ್ಪ ಸಮೃದ್ಧಿ

೧೯. ಆಕಾಂಕ್ಷೆ ಅಹಂಕಾರ
ದುಃಖ ನನಗಿರಲಿ
ವಿವೇಕದಿಂದ
ಯುದ್ಧ ಮಾಡು
ಭಗವದರ್ಪಣಂ
ದೋಷ ಹರಣಂ

೨೦. ಸರಿಯಲ್ಲ
ಪರಧರ್ಮ
ಆಚರಿಸು
ಸ್ವಧರ್ಮ
ಧರ್ಮಪಾಲನೆಯಿಂದ
ಮೃತ್ಯುಂಜಯ

೨೧. ಅಗ್ನಿಯನ್ನು ಹೊಗೆಯೂ
ದರ್ಪಣವನ್ನು ಧೂಳು
ಪಿಂಡವನ್ನು ಮಾಯೆ
ಆವರಿಸುತ್ತವೆ
ಅದರಂತೆ ಕಾಮನೆಗಳು
ಜ್ಞಾನವನ್ನು

೨೨. ರಾಗದ್ವೇಷಗಳನ್ನು ಬಿಡು
ನನ್ನನ್ನು ಆಶ್ರಯಿಸು
ನನ್ನನ್ನೇ ಧ್ಯಾನಿಸುವವನು
ತಪಃ ಪುನೀತ
ಭ್ರಮರ ಕೀಟ
ನ್ಯಾಯ

೨೩. ಯಾರು ಯಾವ ವಿಧದಲ್ಲಿ ನನ್ನನ್ನು
ಆರಾಧಿಸುವರೋ
ಅದೇ ವಿಧವಾಗಿ ಅನುಗ್ರಹಿಸುತ್ತೇನೆ
ಮಾನವರು ನನ್ನನ್ನೇ
ಅನುಸರಿಸುತ್ತಾರೆ
ಯದ್ಭಾವಂ
ತದ್ಭವತಿ

೨೪. ಫಲಾಪೇಕ್ಷೆ ರಹಿತನಾಗಿ
ಕರ್ತೃತ್ವ ಅಹಂಕಾರವನ್ನು
ಜ್ಞಾನಾಗ್ನಿಯಿಂದ ಭಸ್ಮಮಾಡಿದವನೇ
ಪಂಡಿತ.
ನಿರಹಂಕಾರಿಯೇ
ಜ್ಞಾನಿ

೨೫. ಸರ್ವವೂ
ಬ್ರಹ್ಮವೆಂಬ ಭಾವನೆಯಿಂದ
ಯಜ್ಞಾದಿಗಳ ಮಾಡುವವನು
ಬ್ರಹ್ಮನನ್ನೇ ಸೇರುತ್ತಾನೆ
ಸಂಕಲ್ಪದಿಂದಲೇ
ಕಾರ್ಯಸಿದ್ಧಿ

೨೬. ಇಂದ್ರಿಯ ವಿಜೇತನಾಗಿ
ಏಕಾಗ್ರತೆ ಸಾಧಿಸಿದವನಿಗೇ
ಜ್ಞಾನ
ಮೋಕ್ಷ
ಶ್ರದ್ಧೆ ಸಹನೆಗಳೇ
ಮುಕ್ತಿಗೆ ಸೋಪಾನ

೨೭. ಅರ್ಜುನ :

ಕರ್ಮಗಳಿಂದ ಮುಕ್ತನಾಗಬೇಕೆನುವೆ
ಕರ್ಮನಿರತನಾಗಬೇಕೆನುವೆ
ಸ್ಪಷ್ಟವಾಗಿ ವಿವರಿಸು
ಯಾವುದು ಮೇಲು ?
ಅನುಮಾನವು
ಲೋಲಕವಾಗಿದೆ

೨೮. ಭಗವಾನ :

ತ್ಯಾಗವೂ
ನಿಷ್ಕಾಮ ಕರ್ಮವೂ
ಎರಡೂ ಶ್ರೇಷ್ಠ
ಕರ್ಮಯೋಗವೇ
ಪರಮಶ್ರೇಷ್ಠ
ಕಾರ್ಯಾಚರಣೆಯೇ
ಕೈವಲ್ಯಮಾರ್ಗ

೩೧. ಗೋ, ಬ್ರಾಹ್ಮಣ, ಗಜ
ಶುನಕ, ಚಂಡಾಲರಲ್ಲಿ
ಸಮಭಾವ ಕಂಡವನೇ
ಪಂಡಿತನು
ಸಮಭಾವವೇ
ಜ್ಞಾನಸಿದ್ಧಿ

೩೨. ಮರಣದ ಮುನ್ನ
ಮನೋ ಚಾಂಚಲ್ಯವನು
ಜಯಿಸಿದವನೇ
ಯೋಗಿ
ಬದುಕು
ನೀರಮೇಲಿನ ಗುಳ್ಳೆ

೩೩. ಸರ್ವೇಂದ್ರಿಯಗಳನು
ಜಯಿಸಿದ ಜ್ಞಾನಿ
ಸದಾ
ವಿಮುಕ್ತನು
ಸರ್ವಸ್ಯ
ಶರಣಾಗತಿ

೩೪. ಯಜ್ಞ ತಪಗಳಿಗೆ ಭೋಕ್ತನೆಂದೂ
ಸಕಲಲೋಕಗಳಿಗೆ ಈಶ್ವರನೆಂದೂ
ಭೂತಕೋಟಿಗೆ ಕಾರಣನೆಂದೂ
ತಿಳಿದವನು ಶಾಂತಚಿತ್ತ
ತಿಳುವಳಿಕೆಯೇ
ಪರಮಶಾಂತಿ

೩೫. ಸನ್ಯಾಸವೆಂದರೂ
ಯೋಗವೆಂದರೂ ಒಂದೇ
ಸಂಕಲ್ಪಗಳನ್ನು ತ್ಯಜಿಸಿದವನೇ
ಯೋಗಿ
ಅಂಡದಲ್ಲಿ ಪಿಂಡ
ಪಿಂಡದಲ್ಲಿ ಬ್ರಹ್ಮಾಂಡ

೩೬. ಮಿತ ನಿಯತ ಕರ್ಮಗಳ
ಅನುಸರಿಸುವ ನಿಯಮಪರನಿಗೆ
ದುಃಖನಾಶನ ಯೋಗವು
ಸಿದ್ಧಿಸುತ್ತದೆ
ಮಿತಿಯೇ
ಆನಂದ

೩೭. ಗಾಳಿಯಿಲ್ಲದೆಡೆಯ
ದೀಪದಂತೆ
ಸಾಧಕನ ಮನಸ್ಸು
ನಿಶ್ಚಲ
ಯೋಗಿಗಳ ಸಂಪದವೆಂದರೆ
ಏಕಾಗ್ರತೆ

೩೮. ಯೋಗಯುಕ್ತಾತ್ಮನಾಗಿ
ಸಕಲ ಜೀವರಾಶಿಗಳಲ್ಲಿ
ಸಮದೃಷ್ಟಿಯಿಂದ
ಎಲ್ಲೆಡೆಯಲ್ಲಿ ತನ್ನನ್ನೂ
ತನ್ನಲ್ಲಿ ಎಲ್ಲವನ್ನೂ ಕಾಣುವ
ಸಮದರ್ಶನವೇ
ಪಂಡಿತ ಲಕ್ಷಣ

೩೯. ಮನಸ್ಸು ಚಂಚುಲವಾದದು
ಅನುಮಾನವಿಲ್ಲ
ನಿಗ್ರಹ ಕಷ್ಟಸಾಧ್ಯ
ವೈರಾಗ್ಯ ನಿಷ್ಠೆಯಿಂದಲೇ
ಮನಸ್ಸು ಸ್ವಾಧೀನ
ಅಭ್ಯಾಸವೇ
ಪರಮಸಾಧನೆಯ ದಾರಿ

೪೦. ನನ್ನನ್ನೇ ಧೇನಿಸುತ್ತಾ
ಶ್ರದ್ಧೆಯಿಂದ ಪೂಜಿಸುವವನು
ಯೋಗಿಗಳಲ್ಲೇ
ಶ್ರೇಷ್ಠನು
ಏಕಾಗ್ರತೆಯೇ
ಉತ್ತಮಯೋಗ

೪೧. ಕೋಟಿ ಜನರಲ್ಲಿ ಯಾರೋ ಒಬ್ಬರು
ಮೋಕ್ಷಗಾಮಿಯಾಗುತ್ತಾರೆ
ಯಾರೋ ಒಬ್ಬ ಸಿದ್ಧ ಪುರುಷನು
ನನ್ನನ್ನು ಅರಿಯುತ್ತಾನೆ
ಮೋಕ್ಷಗಾಮಿಯೇ
ಸಿದ್ಧಯೋಗಿ

೪೨. ಪಂಚಭೂತಗಳು
ಮನೋಬುದ್ಧಿ ಅಹಂಕಾರಗಳಾಗಿ
ಬಿಡಿ ಬಿಡಿಯಾಗಿರುವುದೇ
ನನ್ನ ಪ್ರಕೃತಿ
ಸರ್ವವ್ಯಾಪಿ
ಸರ್ವೇಶ್ವರ

೪೩. ಭೂರಮಣಿಯ ಪುಣ್ಯಗಂಧವಾಗಿ
ಅಗ್ನಿಯಲ್ಲಿ ತೇಜಸ್ಸಾಗಿ
ಸಕಲ ಪ್ರಾಣಿಗಳ ಜೀವವಾಗಿ
ನಾನೇ ಇರುವವನು
ಹೂವಿನ ಹಾರದ
ದಾರದಂತೆ

೪೪. ನನ್ನ ಮಾಯೆಯ ದಾಟುವುದು
ಸುಲಭ ಸಾಧ್ಯವಲ್ಲ
ನನ್ನಾಶ್ರಯಿಸಿದವರೇ
ದಾಟಬಲ್ಲರು
ಆಶ್ರಯವೇ
ಭ್ರಮನಿರಸನ

೪೫. ಆರ್ತರು
    ಜಿಜ್ಞಾಸುಗಳು, ಜ್ಞಾನಿಗಳು
    ಕಾಮಿತಾರ್ಥರು
    ನನ್ನನ್ನು ಸೇವಿಸುವರು
        ಕೇಳಿದವರಿಗೆ
        ಕೇಳಿದಷ್ಟು !

೪೬. ಬಹುಜನ್ಮಗಳ ನಂತರ
    ಸಕಲಕೆಲ್ಲಕೆ ವಾಸುದೇವನೇ ಕಾರಣವೆಂದು
    ಅರಿತ ಜ್ಞಾನಿ
    ನನ್ನನ್ನೇ ಸೇವಿಸುವನು
        ನರನಿಗೇ ಗೊತ್ತು
        ನಾರಾಯಣನ ವ್ಯಾಪ್ತಿ

೪೭. ಅಂತ್ಯಕಾಲದಲ್ಲಿ
ನನ್ನನ್ನೇ ಧ್ಯಾನಿಸುತ್ತಾ
ದೇಹತ್ಯಾಗ ಮಾಡುವವನು
ನನ್ನನ್ನೇ ಸೇರುವನು
ಸ್ಮರಣೆಯಿಂದ
ಸಾನ್ನಿಧ್ಯ

೪೮. ಚಿಂತೆಯಿಂದ ದೂರವಾಗಿ
ಅಭ್ಯಾಸಯೋಗದಿಂದ
ಧ್ಯಾನಿಸುವವನು
ಪರಮಾತ್ಮನನ್ನೇ-ಸೇರುವನು
ಧ್ಯಾನವೇ
ಯೋಗ

೪೯. ಭುವನ ಪಾಲಕನು
ಅಖಿಲ ಲೋಕ ರಕ್ಷಕನು
ಅಚಿಂತ್ಯರೂಪನು - ತೇಜೋಮಯನು
ಪರಮಾತ್ಮ
ಸೂಕ್ಷ್ಮರೂಪನೇ
ಜಗದ್ರಕ್ಷಕ

೫೦. ಇಂದ್ರಿಯಗಳಿಗೆ ಅಗೋಚರವಾದುದು
ಅವಿನಾಶಿಯಾದುದು
ಪುನರ್ಜನ್ಮವಿಲ್ಲದ ಪರಮಪದವೇ
ನನ್ನ ದಿವ್ಯಧಾಮ
ಪರಮೋತ್ತಮವಾದುದೇ
ಪರಂಧಾಮ

೫೫. ಭಕ್ತಿಪೂರ್ವಕವಾಗಿ
ಪತ್ರಂ ಪುಷ್ಪಂ ಫಲಂ
ತೋಯಂ ಅರ್ಪಿಸುವುದನ್ನು
ಸ್ವೀಕರಿಸುತ್ತೇನೆ
ನೀರಜಾಕ್ಷನಿಗೆ
ನಿರ್ಮಲ ಭಕ್ತಿಯೇ ಪ್ರೀತಿ

೫೬. ನನ್ನಲ್ಲೇ ಮನಸಿಟ್ಟು
ಭಕ್ತನಾಗಿ ಸೇವಿಸು
ಏಕಾಗ್ರಚಿತ್ತದಿಂದ ತಪಿಸಿದರೆ
ನನ್ನನ್ನೇ ಸೇರುವಿ
ಸಾಧನೆಯೇ ಸರ್ವಸ್ವ

೫೭. ಸನಕಾದಿ ಸಪ್ತಋಷಿಗಳೂ
ಚತುರ್ದಶ ಮನುಗಳೂ
ನನ್ನ ಸಂಕಲ್ಪದಂತೆ ಜನಿಸಿ
ಸಮಸ್ತ ಜೀವಿಗಳನ್ನು ಸೃಷ್ಟಿಸಿದರು
ಸೃಷ್ಟಿಗೆ ಮೂಲವೇ
ಭಗವತ್ ಸಂಕಲ್ಪ

೫೮. ಮನೋಪ್ರಾಣಗಳನ್ನು
ನನಗರ್ಪಿಸಿ
ನನ್ನನ್ನೇ ನೆನೆಯುತ್ತಾ
ಆನಂದ ತುಂದಿಲರು ಜ್ಞಾನಿಗಳು
ಸತ್ಸಂಗಂ
ಸಂತೋಷ ತರಂಗಂ

೫೯. ಜೀವಿಗಳ ಅಂತರಂಗದಲ್ಲಿ
ಪ್ರತ್ಯಗಾತ್ಮನು ನಾನೇ
ಸೃಷ್ಟಿಸ್ಥಿತಿ ಲಯಗಳಲ್ಲಿಯೂ
ನಾನೇ !
ಜೀವಾತ್ಮನೇ
ಪರಮಾತ್ಮ

೬೦. ವೇದಗಳಲ್ಲಿ ಸಾಮವೇದ
ಸುರರಲ್ಲಿ ಸುರೇಂದ್ರ
ಪಂಚೇಂದ್ರಿಯಗಳಲ್ಲಿ ಮನಸ್ಸು
ಜೀವಿಗಳಲ್ಲಿ
ಚೈತನ್ಯಶಕ್ತಿ 'ನಾನೇ'
ಶ್ರೇಷ್ಠತ್ವವೇ
ಭಗವತ್ಸ್ವರೂಪ

೬೧. ನಾನು ರಾಕ್ಷಸರಲ್ಲಿ ಪ್ರಹ್ಲಾದ
ಮೃಗಗಳಲ್ಲಿ ಸಿಂಹವೂ
ಪಕ್ಷಿಗಳಲ್ಲಿ ಗುರುತ್ಮಂತನೂ
ಕಾಲನೂ–ನಾನೇ
ಸ್ವಸ್ವರೂಪ
ಪ್ರಕಾಶನ

೬೨. ಐಶ್ವರ್ಯದಿಂದಲೂ
ಶೋಭೆಯಿಂದಲೂ
ಪ್ರಕಾಶಮಾನವಾದ ವಸ್ತುಗಳೆಲ್ಲಾ
ನನ್ನ ಅಂಶಗಳೇ !
ಬೆಳಕೇ
ನನ್ನ ಅಸ್ತಿತ್ವ

೬೩. ಪಾರ್ಥಾ ಅಸಂಖ್ಯಾತವಾಗಿ
ಅನೇಕ ವಿಧವಾಗಿ
ಅನೇಕಾನೇಕ ವರ್ಣಾಕೃತಿಯ
ನನ್ನ ದಿವ್ಯರೂಪವನ್ನು ಕಾಣು !
ಏಕೋ
ನಾರಾಯಣಾ !

೬೪. ಅರ್ಜುನ :
ಸಮಸ್ತ ದೇವತೆಗಳನೂ,
ಋಷಿಗಳನೂ,
ಸೃಷ್ಟಿಕರ್ತನನ್ನೂ, ದಿವ್ಯಸರ್ಪಗಳನು
ನಿನ್ನಲ್ಲಿ ಕಾಣುತ್ತಿದ್ದೇನೆ
ಪರಮಸುಕೃತಂ
ವಿಶ್ವರೂಪದರ್ಶನಂ

೬೫. ಜಗನ್ನಾಥಾ ! ನಿನ್ನ ಅನಂತರೂಪವನು
ಕಾಣುತ್ತಿದ್ದೇನೆ
ಆದಿಮಧ್ಯಾಂತಗಳನು
ಗುರುತಿಸಲಾರದಾಗಿದ್ದೇನೆ
ಎಲ್ಲವೂ ನೀನೇ
ಎಲ್ಲೆಡೆಯೂ ನೀನೇ !

೬೬. ಭೀಭತ್ಸರೂಪಧರಿಸಿರುವ
ನೀನಾರು ?
ನಿನ್ನ ಪ್ರವೃತ್ತಿಯೇನು ?
ತಿಳಿಸು ಪರಮಾತ್ಮಾ ?
ಪ್ರಶ್ನೆಯೇ
ಬೀಗದಕೈ

೬೭. ಭಗವಾನ :

ನಾನು ಕಾಲಸ್ವರೂಪನು
ಸಂಹಾರಕ್ಕಾಗಿ ಸಂಕಲ್ಪಿಸಿದ್ದೇನೆ
ನೀನು ಯುದ್ಧಮಾಡದಿದ್ದರೂ
ಯಾರೂ ಬದುಕುಳಿಯುವುದಿಲ್ಲ
ಪ್ರಳಯವೂ
ಪರಮೇಶ್ವರನೆ !

೬೮. ಈಗಾಗಲೇ ನನ್ನಿಂದ ಹತರಾಗಿರುವ
ಭೀಷ್ಮ ದ್ರೋಣರನ್ನು ಸಂಹರಿಸು
ಅಧೈರ್ಯವನ್ನು ತ್ಯಜಿಸು
ಶತ್ರುಗಳನ್ನು ಜಯಿಸು
ಕರ್ತವ್ಯವೇ
ಪರಮಧರ್ಮ

೧೯. ಅರ್ಜುನ :

ಓ, ಚಕ್ರಧಾರೀ
ನಿನ್ನ ಮೊದಲಿನ ರೂಪವನ್ನು ತೋರು
ಚತುರ್ಭುಜ ರೂಪವನ್ನೇ ಮತ್ತೆ ಧರಿಸು
ದೈವಂ
ಮಾನುಷರೂಪೇಣ

೨೦. ಭಗವಾನ :

ಅರ್ಜುನಾ ! ಈ ವಿಶ್ವರೂಪವು
ಸುಲಭ ಸಾಧ್ಯವಲ್ಲ
ದೇವತೆಗಳು ನಿತ್ಯ
ಈ ದರ್ಶನಕ್ಕಾಗಿ ತಪಿಸುವರು
ದರ್ಶನಭಾಗ್ಯಂ
ಸರ್ವೋತ್ಕೃಷ್ಟಂ

೭೧. ನನ್ನಲ್ಲಿ ಶ್ರದ್ಧೆಯಿಂದ
ಏಕಾಗ್ರಚಿತ್ತದಿಂದ
ಉಪಾಸನೆ ಮಾಡುವವರು
ಉತ್ತಮ ಯೋಗಿಗಳು
ಶ್ರದ್ಧಾ ಭಕ್ತಿಗಳೇ
ಯೋಗಿ ಲಕ್ಷಣಗಳು

೭೨. ಅಭ್ಯಾಸಕ್ಕಿಂತ ಜ್ಞಾನ
ಅದಕ್ಕಿಂತ ಧ್ಯಾನ
ಅದಕ್ಕಿಂತ ಮೇಲು
ಕರ್ಮಫಲ ತ್ಯಾಗ
ತ್ಯಾಗವೇ
ಶಾಂತಿಗೆ ಮೂಲ

೭೩. ಆಸೆಗಳಿಲ್ಲದವನು
ಕರ್ತೃತ್ವ ಫಲರಹಿತನು
ಭಕ್ತಿ ನಿರ್ಭರನು
ನನಗೆ ಅತ್ಯಂತ ಪ್ರಿಯನು
ಉತ್ತಮನೆಂದರೆ
ಕರ್ಮಫಲತ್ಯಾಗಿ

೭೪. ಶತ್ರುಮಿತ್ರರಲ್ಲಿ
ಸಮದೃಷ್ಟಿ ಉಳ್ಳವನು
ಸುಖದುಃಖಗಳಲ್ಲಿ ಸಮಾನನು
ನಿರಾಸಕ್ತನು
ಗೋವಿಂದನಿಗೆ
ಅತಿಪ್ರಿಯನು

೭೫. ಸ್ಥಿರಚಿತ್ತನೂ
ಸ್ಥಿರ ನಿವಾಸವಿಲ್ಲದವನೂ
ನಿಂದಾಸ್ತುತಿಗಳಲ್ಲಿ ಸಮಾನನೂ
ನನಗತಿಪ್ರಿಯನು
ಮನೋಪುಷ್ಪಾರ್ಪಣೆಯೇ
ಮಾಧವನಿಗೆ ಪ್ರಿಯ

೭೬. ಅರ್ಜುನಾ, ಈ ಶರೀರವೇ ಕ್ಷೇತ್ರ
ಈ ಕ್ಷೇತ್ರವನ್ನು ಅರಿತವನೇ
ಕ್ಷೇತ್ರಜ್ಞ
ದೇಹದಲ್ಲಿಯೇ
ದೇಹ ಸಾಕ್ಷಿ

೭೭. ನಿರಂತರವಾದ ಆತ್ಮಜ್ಞಾನ
ತತ್ವಜ್ಞಾನ ಚಿಂತನೆ
ಇವುಗಳಿಗೆ ವಿರೋಧವಾದುದೇ
ಅಜ್ಞಾನ
ಜ್ಞಾನಂ
ಜ್ಯೋತಿ ಸದೃಶಂ

೭೮. ಕಾರ್ಯಕಾರಣಗಳಿಗೆ
ಪ್ರಕೃತಿಯೇ ಸಾಕ್ಷಿ
ಸುಖದುಃಖಗಳಿಗೆ
ಪುರುಷನೇ ಕಾರಣ
ಪ್ರಕೃತಿ ಸಂಯೋಗವೇ
ಸುಖದುಃಖದಾ ಅನುಭವ

೭೯. ಪ್ರಾಣಿಗಳು ನಾಶವಾದರೂ
ಅವಿನಾಶಿಯಾದ ಪರಮಾತ್ಮನನ್ನು
ಕಾಣಬಲ್ಲವನೇ
ನಿಜವಾದ ಜ್ಞಾನಿ !
ನಿತ್ಯವೇ
ಪರಮಾತ್ಮ

೮೦. ಕರ್ತೃತ್ವವಾಗಲೀ
ಕರ್ಮಫಲ ಸಂಬಂಧವಾಗಲೀ
ಜನ್ಮವಿಕಾರಗಳಾಗಲೀ
ಸಂಬಂಧವಿಲ್ಲದವನೇ ಪರಮಾತ್ಮ
ಕೆಸರಿನಲ್ಲಿಯೇ
ಕಮಲ

೮೧. ಸಮಸ್ತ ಲೋಕಗಳಿಗೆ ಬೆಳಕು
ಒಬ್ಬನೇ ಸೂರ್ಯ
ಸರ್ವದೇಹಗಳಲ್ಲಿ ಕಾಂತಿ
ಸರ್ವೇಶ್ವರನೇ
ಬೆಳಕೇ
ದೈವ

೮೨. ಯಾವ ಜ್ಞಾನದಿಂದ
ಋಷಿ ಮುನಿಗಳು ಮೋಕ್ಷ ಪಡೆದರೋ
ಅದನ್ನೇ ಪುನಃ
ನಿನಗೆ ತಿಳಿಸುತ್ತಿದ್ದೇನೆ
ಪದೇ ಪದೇ
ಜ್ಞಾನಬೋಧೆ

೮೩. ಸಮಸ್ತ ಜೀವ ಕೋಟಿಗೆ
ಪ್ರಕೃತಿಯೇ ತಾಯಿ
ನಾನೇ
ಬೀಜ
ಸೃಷ್ಟಿಗೆ ಮೂಲ
ಪರಮಾತ್ಮ

೮೪. ಗುಣಗಳಲ್ಲಿ ಸತ್ವಗುಣವೇ
ನಿರ್ಮಲ
ಜ್ಞಾನಾಸಕ್ತಿಯಿಂದ
ಅದು ಜೀವನವನ್ನು ಬಂಧಿಸುತ್ತದೆ
ತ್ರಿಗುಣಾತೀತ ಸ್ಥಿತಿಯೇ
ಪರಮಾತ್ಮನ ಅಭಿಲಾಷೆ

೮೫. ಕರ್ಮಗುಣಗಳಲ್ಲಿಯ ಆಸಕ್ತಿಯಿಂದ
ರಜೋಗುಣವು
ಆತ್ಮನನ್ನು
ಬಂಧಿಸುತ್ತದೆ
ವಿಷಯವಾಸನೆಗಳೇ
ಪ್ರತಿಬಂಧಕಗಳು

೮೬. ತಮೋಗುಣದಿಂದ
ಮೋಹವುಂಟಾಗುತ್ತದೆ
ಅದರಿಂದಲೇ ಜೀವಿಗೆ
ಬಂಧನ
ಸೂರ್ಯನನ್ನು
ಮೇಘವು ಆವರಿಸಿದಂತೆ

೮೭. ಸಮಭಾವದಿಂದ
ಕರ್ತೃತ್ವ ಬುದ್ಧಿಯನ್ನು ಬದಿಗಿರಿಸಿ
ಬ್ರಹ್ಮನಿಷ್ಠೆ ಸಾಧಿಸಿದವನೇ
ಗುಣಾತೀತ
ನಿರ್ಗುಣನೇ
ಉತ್ತಮನು

೮೮. ತಲೆಕೆಳಗಾಗಿರುವ
ಸಂಸಾರವೆಂಬ ಅಶ್ವತ್ಥವೃಕ್ಷವು
ಅವಿನಾಶಿ ಎಂದರಿತವನೇ
ವೇದವಿದನು
ವೈರಾಗ್ಯವೇ
ಖಡ್ಗ

೮೯. ಗಾಳಿ ಗಂಧವನು ಪಸರಿಸಿದಂತೆ
ಪೂರ್ವಜನ್ಮ ಭಾವಪರಂಪರೆಯನು
ಹೊಸ ಜನುಮಕ್ಕೆ
ಜೀವಿ ಹೊತ್ತು ಸಾಗುತ್ತಾನೆ
ಜನ್ಮಾಂತರ
ಕರ್ಮಬಂಧ

೯೦. ಸೂರ್ಯಚಂದ್ರರು
ಬೆಳಗಿಸಲಾರರು
ನನ್ನ ಪರಮಪದವು
ಸ್ವಯಂ ಪ್ರಕಾಶಮಾನವಾದುದು
ಪುನರ್ಜನ್ಮರಹಿತಂ
ಪರಂಧಾಮಂ

೯೧. ಜೀವಿಗಳ ಶರೀರದಲ್ಲಿ
ಜಠರಾಗ್ನಿ ರೂಪದಲ್ಲಿ
ಆಹಾರವನ್ನು ರಕ್ತಗತಮಾಡುವ
ವೈಶ್ವಾನರನು ನಾನೇ
ಚೈತನ್ಯವೇ
ಪ್ರಜ್ವಲನ

೯೨. ದುರಹಂಕಾರ, ದ್ರೋಹ ಚಿಂತನೆ
ಇಲ್ಲದವರು
ಪ್ರತಿಭೆ, ಸಹನೆ, ಶುಚಿಯಿಂದಿರುವವರು
ದೈವಾಂಶ ಸಂಭೂತರು
ಸದ್ಗುಣವೇ
ದೈವಾಂಶ

೯೩. ಅಹಂಕಾರ, ದುರಭಿಮಾನ
ಕೋಪ, ಕಾಠಿಣ್ಯತೆ, ಅವಿವೇಕ
ಮುಂತಾದ ದುರ್ಗುಣಗಳೇ
ರಾಕ್ಷಸರು
ಬಂಧನವೇ
ಅಸುರ ಸಂಪತ್ತು

೯೪. ಕಾಮ ಕ್ರೋಧ ಲೋಭಗಳೇ
ನರಕದ ಬಾಗಿಲುಗಳು
ಆತ್ಮಜ್ಞಾನ
ವಿನಾಶಕಗಳು
ವೈಪರೀತ್ಯವೇ
ವಿನಾಶಕಾರಿ

೧೫. ವೇದಶಾಸ್ತ್ರ ವಿಧಿಗಳ ತೊರೆದು
ಮನಬಂದಂತೆ ನಡೆಯುವವರು
ಪುರುಷಾರ್ಥ ಸಿದ್ಧಿಯನೂ
ಮೋಕ್ಷವನೂ ಪಡೆಯಲಾರರು
ಅತಿಕ್ರಮಣವೇ
ಅನರ್ಥಕಾರಿ

೧೬. ಸಾತ್ವಿಕ, ರಾಜಸ, ತಾಮಸಗುಣಗಳೇ
ಪೂರ್ವಜನ್ಮ ವಾಸನೆಗಳು
ಅವುಗಳ
ಅರಿತುಕೋ
ಹೊಸ ಜನ್ಮವೇ
ಭೂಮಿಕೆ

೯೭. ಸತ್ವಗುಣದಿಂದ ದೇವತೆಗಳೂ
ರಜೋಗುಣದಿಂದ ರಾಕ್ಷಸರೂ ಬ
ತಮೋಗುಣದಿಂದ
ಭೂತಪ್ರೇತಗಳು
ಗುಣಗಳಂತೆ
ಆರಾಧನೆ

೯೮. ಪರರನೊಲಿಸದ
ಪ್ರಿಯಭಾಷಣ
ವೇದಾಧ್ಯಯನ
ವಾಚಿಕ ತಪಸ್ಸು
ಮಾತೇ
ಮಂತ್ರ

೯೯. ಫಲಾಪೇಕ್ಷೆಯನು ತ್ಯಜಿಸುವುದೇ
ಸನ್ಯಾಸವೆಂದು ಕೆಲರು
ಕರ್ಮಫಲ ತ್ಯಾಗವೇ
ತ್ಯಾಗವೆಂದು ಕೆಲರು
ಆಮ್ರಫಲವೇ
ಮಾವಿನಹಣ್ಣು

೧೦೦. ಕರ್ಮಫಲದೊಳು ಮೂರುವಿಧ
ಬೇಕೆಂದವರಿಗೆ
ನಾಕದಲಿ ದೊರಕುವವು
ತ್ಯಾಗಿಗಳಿಗೆ
ಎಂದೂ ದೊರಕುವುದಿಲ್ಲ
ಫಲಾಪೇಕ್ಷೆಯೇ
ಕರ್ಮಬಂಧನ

೧೦೧. ಧರ್ಮದಲ್ಲಿ ಪ್ರವೃತ್ತಿಯನ್ನು
ಅಧರ್ಮದಲ್ಲಿ ನಿವೃತ್ತಿಯನ್ನು
ಬಂಧನ ಮುಕ್ತಿಗಳ ಅರಿಯುವುದೇ
ಸಾತ್ವಿಕ ಬುದ್ಧಿ
ವಿಚಕ್ಷಣೆಯೇ
ಜ್ಞಾನ

೧೦೨. ಸಕಲ ಭೂತ ಪರಿಪಾಲಕನಾದ
ಈಶ್ವರನು
ಜೀವಿಗಳ ಹೃದಯದಲ್ಲಿ
ನೆಲೆಸಿದ್ದಾನೆ
ಲೀಲಾ
ಮಾನುಷಮೂರ್ತಿ

೧೦೩. ಎಲ್ಲ ಧರ್ಮಗಳ ತೊರೆದು
ನನಗೇ ಶರಣಾಗು
ಸಕಲ ಪಾಪಗಳಿಂದ
ವಿಮುಕ್ತಿ ನೀಡುತ್ತೇನೆ
ಭಗವದಾಶ್ರಯವೇ
ಪಾಪವಿಮೋಚನೆ

೧೦೪. ಅತಿರಹಸ್ಯ ಗೀತಾಶಾಸ್ತ್ರವನು
ನನ್ನ ಭಕ್ತರಿಗೆ ವಿವರಿಸುವವನು
ಪರಮಭಕ್ತನಾಗಿ
ನನ್ನನ್ನೇ ಸೇರುವನು
ಗೀತಾಜ್ಞಾನದಾನವೇ
ಮುಕ್ತಿಗೆ ಸೋಪಾನ

೧೦೫. ಪಾರ್ಥಾ ಏಕಾಗ್ರಚಿತ್ತದಿಂದ
ನನ್ನ ಮಾತು ಕೇಳಿದೆಯಾ
ಅಜ್ಞಾನ ಜನ್ಯವಾದ
ನಿನ್ನ ವಿಷಾದವು ತೊಲಗಿತೇ ?
ಅಜ್ಞಾನವೇ
ತಮಂಧಕಾರ

೧೦೬. ಅರ್ಜುನ–ಕೃಷ್ಣಾ, ನಿನ್ನ ಕೃಪೆಯಿಂದ
ನನ್ನ ಅಜ್ಞಾನವು ತೊಲಗಿತು
ಆತ್ಮಸ್ಮೃತಿ
ಉಂಟಾಯಿತು
ನಿನ್ನ ಮಾತೇ
ಶಿರೋಧಾರ್ಯ

– ಈ ರೀತಿ ಕೃಷ್ಣಾರ್ಜುನ ಸಂವಾದದ ನಂತರ, ಅರ್ಜುನನ ಸಂಶಯಗಳು ಬಯಲಾಗಿ, ಆತ್ಮಸ್ಮೃತಿ ಉಂಟಾಗಿ, ಕಾರ್ಯಗಳಿಗೆ ತಾನು ನಿಮಿತ್ತ ಮಾತ್ರನೆಂಬ ಅರಿವುಂಟಾಗಿ ಯುದ್ಧ ಸನ್ನದ್ಧನಾದನು.

೧೦೭. ಸಂಜಯ :

ವ್ಯಾಸ ಮಹರ್ಷಿಗಳ ಕರುಣೆಯಿಂದ
ಕೃಷ್ಣಾರ್ಜುನರ
ರಹಸ್ಯ ಸಂವಾದವನ್ನು
ಸ್ವಯಂ ಕೇಳಿದೆನು
ಸಂಜಯನ
ಪುಣ್ಯಭಾಗ್ಯ

೧೦೮. ಯೋಗೀಶ್ವರನಾದ ಶ್ರೀಕೃಷ್ಣನೂ
ಧನುರ್ಧಾರಿಯಾದ ಪಾರ್ಥನೂ
ಎಲ್ಲಿರುವರೋ ಅಲ್ಲಿ
ಐಶ್ವರ್ಯವೂ ವಿಜಯವೂ
ಇರುತ್ತವೆ
ಗೀತಾಜ್ಞಾನವೇ
ಮುಕ್ತಿದಾಯಕ

# ಭಾರತಭಾಷಾ ಭೂಷಣ
# ಡಾ. ಕೇತವರಪು ರಾಜ್ಯಶ್ರೀ

◆

ಡಾ. ಕೇತವರಪು ರಾಜ್ಯಶ್ರೀ ಎಂ.ಕಾಂ. ಆಂಧ್ರಪ್ರದೇಶ ಸರಕಾರದ ಉಪಕಾರ್ಯದರ್ಶಿ(ನಿ) ಲೇಖಕಿ, ಪತ್ರಕರ್ತೆ, ದೂರದರ್ಶನ ಮತ್ತು ಆಕಾಶವಾಣಿ ಕಲಾವಿದೆ, ವೀಣಾ ವಾದಕಿ, ಸಮಾಜ ಸೇವಕಿ.

೧. ಸ್ವರಚಿತ – ಪ್ರಕಟಿತ ಕಾವ್ಯ ಸಂಪುಟಗಳು – ಹದಿನೇಳು

೨. ಸಂಪಾದಿತ ಕೃತಿಗಳು – ಐದು

೩. ಪ್ರಶಸ್ತಿ – ಪುರಸ್ಕಾರ

   ೧. ಅಖಿಲ ಭಾರತೀಯ ಭಾಷಾ ಸಾಹಿತ್ಯ ಸಮ್ಮೇಲನ, ಭೋಪಾಲ್ ಅವರಿಂದ. **'ಭಾರತ ಭಾಷಾ ಭೂಷಣ'**.

   ೨. ವೇದಾಂತ ವಕ್ತ

   ೩. ಟಂಗಟೂರಿ ಪ್ರಕಾಶಂ ಪಂತುಲು ಪ್ರಶಸ್ತಿ

   ೪. ಮದರ್ ತೆರೆಸಾ ಪ್ರಶಸ್ತಿ

   ೫. ವಂಗೂರಿ ಫೌಂಡೇಶನ್ ಇಂಟರ್‌ನ್ಯಾಶನಲ್ ಪ್ರಶಸ್ತಿ ಮತ್ತಿತರ ಅನೇಕ ಪ್ರಶಸ್ತಿಗಳು.

ವಿಳಾಸ : ಪ್ಲಾಟ್ ೩೦೧, ಗೋಕುಲ ಅಪಾರ್ಟಮೆಂಟ್ಸ್,
St No. 4, ಅಶೋಕ ನಗರ,
ಹೈದರಾಬಾದ್ – ೫೦೦ ೦೨೦
ತೆಲಂಗಾಣ. ಮೊ : ೮೫೦೦೧೨೯೯೮೦

# ಗುರುಮೂರ್ತಿ ಪೆಂಡಕೂರು

◆

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯ ಗುರುಮೂರ್ತಿ ಪೆಂಡಕೂರು ವ್ಯಾಪಾರ ನಿರತವಾದ ದೊಡ್ಡ ಕುಟುಂಬದ ಸದಸ್ಯರು. ತಮ್ಮ ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಬಳ್ಳಾರಿಯಲ್ಲಿ, ಪದವಿಗಳನ್ನು ಧಾರವಾಡ, ಬೆಳಗಾವಿ ಮತ್ತು ಮೈಸೂರಿನಲ್ಲಿ ಪಡೆದರು. ವ್ಯಾಪಾರದ ಜೊತೆ ಸಾಹಿತ್ಯ, ಶಿಕ್ಷಣ ಮತ್ತು ಸಮಾಜ ಕಾರ್ಯದಲ್ಲಿ ಅವರು ಗಣನೀಯ ಸೇವೆ ಸಲ್ಲಿಸಿದ್ದಾರೆ.

ಕಳೆದ ಐವತ್ತು ವರ್ಷಗಳಲ್ಲಿ ೩ ಕವನ ಸಂಕಲನಗಳನ್ನು, ೨ ವಚನ ಸಂಪುಟಗಳನ್ನು, ೫ ಸಂಶೋಧನಾ ಸಂಪುಟಗಳನ್ನು, ೮ ಪ್ರವಾಸ ಕಥನಗಳನ್ನು, ೧೧ ಸಂಪಾದಿತ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಅನುವಾದ ರಂಗದಲ್ಲಿ ವಿಶೇಷ ಕೆಲಸ ಮಾಡಿರುವ ಅವರು ೧೭ ತೆಲುಗು, ೪ ಇಂಗ್ಲೀಷ್, ೨ ಹಿಂದಿ ೧ ಸಂಸ್ಕೃತ ಗ್ರಂಥಗಳನ್ನು ಕನ್ನಡಾನುವಾದ ಮಾಡಿದ್ದಾರೆ.

ಪರಿಸರ ಕಾಳಜಿಯನ್ನು ಬೆಳೆಸಲು ಹಳ್ಳಿಯ ಬೀದಿ ಬದಿಗಳಲ್ಲಿ ತೋಟಗಾರಿಕೆ ಇಲಾಖೆಯ ಸಹಕಾರದಿಂದ ಮರಗಳ ನೆಡಿಸಿದರು. ಉತ್ತಮ ಶಿಕ್ಷಣಕ್ಕಾಗಿ ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್ತಿನ ಮಾರ್ಗದರ್ಶನದಲ್ಲಿ ಶಾಲೆಗಳನ್ನು ಸ್ಥಾಪಿಸಿದರು. ಓದುವ ಹವ್ಯಾಸವನ್ನು ಬೆಳೆಸಲು ಗ್ರಂಥಾಲಯ ವಾಚನಾಲಯವನ್ನು, ಹೊಸ ಬರಹಗಾರರಿಗೆ ಬೆಂಬಲ ನೀಡಲು "ಯುವಕರ ಸಂಘ" ಪ್ರಕಾಶನವನ್ನು ಆರಂಭ ಮಾಡಿದರು.

ಜನ ಜಾಗೃತಿಗಾಗಿ ಜಿಜ್ಞಾಸುಗಳ ಕೂಟ, ಜಿಲ್ಲಾ ಬರಹಗಾರರ ಸಮ್ಮೇಳನ, ಜಿಲ್ಲಾ ಯುವಕ ಸಮ್ಮೇಳನ, ಸಾಹಿತ್ಯ ಸಮ್ಮೇಳನ ನಡೆಸಿದರು. ಮೂಲೆ ಗುಂಪಾಗಿದ್ದ ಜನಪದ ಕಲಾವಿದರನ್ನು ಬೆಳಕಿಗೆ ತಂದು ಉತ್ಸಾಹ ತುಂಬಿದರು. ತೊಗಲುಗೊಂಬೆ ಆಟದ ತಂಡಕ್ಕೆ ಹೊಸ ಮೆರುಗು ನೀಡಿ ೧೯೮೪ರಲ್ಲಿ ಜರ್ಮನಿಯಲ್ಲಿ ನಡೆದ ಅಂತರರಾಷ್ಟ್ರೀಯ ಗೊಂಬೆಯಾಟದ ಉತ್ಸವಕ್ಕೆ ಕರೆದೊಯ್ದರು. ಆರ್ಯವೈಶ್ಯ ಸಂಘ ಟ್ರಸ್ಟ್ ಸ್ಥಾಪಿಸಿ ಸುಂದರವಾದ ದೇವಾಲಯ ಮತ್ತು ಕಲ್ಯಾಣ ಮಂಟಪ ಕಟ್ಟಿದರು. ತುರ್ತುಪರಿಸ್ಥಿತಿಯಲ್ಲಿ

ದಬ್ಬಾಳಿಕೆಯ ವಿರುದ್ಧ ಹೋರಾಡಿದರು. ಹೀಗೆ ತಾವು ಜನಿಸಿದ ಊರಿಗೆ, ಕುಟುಂಬಕ್ಕೆ, ಸಮಾಜಕ್ಕೆ ಮತ್ತು ಕನ್ನಡದ ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ನಿರಂತರ ಸೇವೆ ಮಾಡುತ್ತಿರುವ ಸಾರ್ಥಕ ಜೀವಿಗಳು.

ಆರು ವರ್ಷ ಕಾಲ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ, ಆರು ವರ್ಷ ಕನ್ನಡ ಸಾಹಿತ್ಯ ಪರಿಷತ್ತಿನ ಬಳ್ಳಾರಿ ಜಿಲ್ಲಾ ಅಧ್ಯಕ್ಷರಾಗಿ, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾಗಿ ದುಡಿದಿದ್ದಾರೆ.

ಅವರ ಸೇವೆಯನ್ನು ಗಮನಿಸಿ ಅವರಿಗೆ ಅನೇಕ ಪ್ರಶಸ್ತಿಗಳು ಲಭಿಸಿವೆ. ಅದರಲ್ಲಿ ಪ್ರಮುಖವಾಗಿ ಈ ರೀತಿಯಿದೆ.

* ೨೦೦೨ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ರಾಜ್ಯೋತ್ಸವ ಪ್ರಶಸ್ತಿ.
* ೨೦೦೪ರಲ್ಲಿ ಪಾಣಿಪತ್ ನಗರದ ಸುಭದ್ರಕುಮಾರಿ ಚೌಹಾನ್ ಪ್ರಶಸ್ತಿ
* ೨೦೦೪ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ
* ೨೦೦೭ರಲ್ಲಿ ಜೀವಮಾನ ಸೇವೆಗಾಗಿ – ಕರ್ನಾಟಕ ಅನುವಾದ ಅಕಾಡೆಮಿ ಪ್ರಶಸ್ತಿ
* ೨೦೦೯ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
* ೨೦೧೩ರಲ್ಲಿ ಆಂಧ್ರ ಪ್ರದೇಶದ ಗಾಡಿಚರ್ಲ ಹರಿಸರ್ವೋತ್ತಮರಾವ್ ಪ್ರಶಸ್ತಿ

ಸದಾ ಅಧ್ಯಯನ, ಪ್ರವಾಸ ಮತ್ತು ಬರವಣಿಗೆಯಲ್ಲಿ ತೊಡಗಿಕೊಂಡು ಸಮಾಜಕ್ಕೆ ಮಾರ್ಗದರ್ಶನ ಮಾಡುತ್ತಿದ್ದಾರೆ.



ಡಾ. ಕೇತವರಪು ರಾಜ್ಯಶ್ರೀ ಎಂ.ಕಾಂ. ಆಂಧ್ರಪ್ರದೇಶ ಸರಕಾರದ ಉಪಕಾರ್ಯದರ್ಶಿ(ನಿ) ಲೇಖಕಿ, ಪತ್ರಕರ್ತೆ, ದೂರದರ್ಶನ ಮತ್ತು ಆಕಾಶವಾಣಿ ಕಲಾವಿದೆ, ವೀಣಾ ವಾದಕಿ, ಸಮಾಜ ಸೇವಕಿ.

೧. ಸ್ವರಚಿತ – ಪ್ರಕಟಿತ ಕಾವ್ಯ ಸಂಪುಟಗಳು – ಹದಿನೇಳು

೨. ಸಂಪಾದಿತ ಕೃತಿಗಳು – ಐದು

೩. ಪ್ರಶಸ್ತಿ – ಪುರಸ್ಕಾರ

 ೧. ಅಖಿಲ ಭಾರತೀಯ ಭಾಷಾ ಸಾಹಿತ್ಯ ಸಮ್ಮೇಲನ, ಭೋಪಾಲ್ ಅವರಿಂದ. 'ಭಾರತ ಭಾಷಾ ಭೂಷಣ'.

 ೨. ವೇದಾಂತ ವಕ್ತ

 ೩. ಟಂಗಟೂರಿ ಪ್ರಕಾಶಂ ಪಂತುಲು ಪ್ರಶಸ್ತಿ

 ೪. ಮದರ್ ತೆರೆಸಾ ಪ್ರಶಸ್ತಿ

 ೫. ವಂಗೂರಿ ಫೌಂಡೇಶನ್ ಇಂಟರ್‌ನ್ಯಾಶನಲ್ ಪ್ರಶಸ್ತಿ ಮತ್ತಿತರ ಅನೇಕ ಪ್ರಶಸ್ತಿಗಳು.

ಗುರುಮೂರ್ತಿ ಪೆಂಡಕೂರು
ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯ
ವ್ಯಾಪಾರ ನಿರತವಾದ
ದೊಡ್ಡ ಕುಟುಂಬದ ಸದಸ್ಯರು.
ತಮ್ಮ ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಬಳ್ಳಾರಿಯಲ್ಲಿ,
ಪದವಿಗಳನ್ನು ಧಾರವಾಡ, ಬೆಳಗಾವಿ ಮತ್ತು
ಮೈಸೂರಿನಲ್ಲಿ ಪಡೆದರು. ವ್ಯಾಪಾರದ ಜೊತೆ ಸಾಹಿತ್ಯ,
ಶಿಕ್ಷಣ ಮತ್ತು ಸಮಾಜ ಕಾರ್ಯದಲ್ಲಿ
ಅವರು ಗಣನೀಯ ಸೇವೆ ಸಲ್ಲಿಸಿದ್ದಾರೆ.
ಕಳೆದ ಐವತ್ತು ವರ್ಷಗಳಲ್ಲಿ
 ೩ ಕವನ ಸಂಕಲನಗಳನ್ನು
 ೨ ವಚನ ಸಂಪುಟಗಳನ್ನು
 ೫ ಸಂಶೋಧನಾ ಸಂಪುಟಗಳನ್ನು
 ೮ ಪ್ರವಾಸ ಕಥನಗಳನ್ನು
 ೧೧ ಸಂಪಾದಿತ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಅನುವಾದ ರಂಗದಲ್ಲಿ
ವಿಶೇಷ ಕೆಲಸ ಮಾಡಿರುವ ಅವರು
 ೧೩ ತೆಲುಗು
 ೪ ಇಂಗ್ಲೀಷ್
 ೨ ಹಿಂದಿ
 ೧ ಸಂಸ್ಕೃತ ಗ್ರಂಥಗಳನ್ನು
ಕನ್ನಡಾನುವಾದ ಮಾಡಿದ್ದಾರೆ.



**ಯುವಕರ ಸಂಘ (ರಿ),** ರಾಮನಗರ, ಹಗರಿಬೊಮ್ಮನಹಳ್ಳಿ - 583 212 ಬಳ್ಳಾರಿ ಜಿಲ್ಲೆ